ಸಂಪುಟ: 11 ಸಂಚಿಕೆ: 222 ಪುಟಗಳು: 4+2 ಬೆಲೆ: ₹ 3.00 ಶುಕ್ರವಾರ, ಅಕ್ಟೋಬರ್ ೦೯, ೨೦೨೬ Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 222 Pages : 4+2 Rate : 3.00 Friday, October 09, 2026 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2020-22

## 250 ಎಕರೆ ಉಳಿಸಲು ಗ್ರಾಮಸ್ಥರ ರಣಕಹಳೆ | ಖಾಸಗಿ ಕಂಪನಿ ಹಸ್ತಾಂತರಕ್ಕೆ ತಡೆ ನೀಡಲು ಡಿಸಿಗೆ ಮನವಿ

# ಗೊಜನೂರು ಗೋಮಾಳಕ್ಕೆ ಕುತ್ತು

ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ/ ಗದಗ

ಲಕ್ಷ್ಮೇಶ್ವರ ತಾಲೂಕಿನ ಗೊಜನೂರು ಗ್ರಾಮದ ಸರ್ಕಾರಿ ಗೋವಾಳ ಜಮೀನನ್ನು ಮೈಸೂರು ಮರ್ಕಂಟೈಲ್ ವಿಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್‌ಗೆ ಮಾರಾಟ ಅಥವಾ ಹಸ್ತಾಂತರ ಮಾಡಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ ನೂರಾರು ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಗೋಮಾಳ ಉಳಿಸುವಂತೆ ಆಗ್ರಹಿಸಿ ಗದಗ ಜಿಲ್ಲಾಧಿಕಾರಿ ಕಚೇರಿಗೆ ಪ್ರತಿಭಟನಾ ಮೆರವಣಿಗೆಯಲ್ಲಿ ಆಗಮಿಸಿದ ಗ್ರಾಮಸ್ಥರು, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರಿಗೆ ಮನವಿ ಸಲ್ಲಿಸಿದರು.



ಗೊಜನೂರು ಗ್ರಾಮದ ರಿ.ಸ.ನಂ. 214/1ರಲ್ಲಿ 207 ಎಕರೆ 21 ಗುಂಟೆ ಹಾಗೂ ರಿ.ಸ.ನಂ. 215ರಲ್ಲಿ 33 ಎಕರೆ 1 ಗುಂಟೆ ಜಮೀನು ಇದ್ದು, ಒಟ್ಟು ಸುಮಾರು 250 ಎಕರೆ ಪ್ರದೇಶದ ಈ ಜಮೀನು ಕಂದಾಯ ದಾಖಲೆಗಳಲ್ಲಿ 'ಗೊಜನೂರು ಮೊಪತ್ ಗಾಯರಾಣ' ಎಂದು ನಮೂದಾಗಿದೆ. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಕುರಿಗಾಹಿಗಳು ದನ, ಕುರಿ, ಆಡುಗಳನ್ನು ಮೇಯಿಸಲು ಈ ಗೋಮಾಳವನ್ನು ಅವಲಂಬಿಸಿದ್ದಾರೆ.

ಈ ಹಿಂದೆ ರಿ.ಸ.ನಂ. 214/1ರ 4 ಎಕರೆ ಹಾಗೂ ರಿ.ಸ.ನಂ. 215ರ 16 ಎಕರೆ 31 ಗುಂಟೆ ಸೇರಿ ಸುಮಾರು 20 ಎಕರೆ ಜಮೀನನ್ನು ಮೈಸೂರು ಮರ್ಕಂಟೈಲ್ ವಿಂಡ್ ಕಂಪನಿಗೆ ಲೀಸ್ ನೀಡಲಾಗಿದೆ. ಆದರೆ ಲೀಸ್‌ಗೆ ನೀಡಿರುವ ಪ್ರದೇಶಕ್ಕಿಂತ ಹೆಚ್ಚಿನ ಜಮೀನನ್ನು ಕಂಪನಿ ಒತ್ತುವರಿ ಮಾಡಿಕೊಂಡಿದೆ ಎಂಬ ಆರೋಪವನ್ನು ಗ್ರಾಮಸ್ಥರು ಮಾಡಿದ್ದಾರೆ. ಸುಮಾರು 50 ಎಕರೆ ಪ್ರದೇಶ ಒತ್ತುವರಿಯಾಗಿರುವ ಶಂಕೆ ವ್ಯಕ್ತಪಡಿಸಿರುವ ಅವರು, ಜಮೀನಿನ ಸಮಗ್ರ ಸರ್ವೇ ನಡೆಸಿ ಗಡಿ ಗುರುತಿಸಬೇಕು.

> ಗೋಮಾಳ ಗುಡ್ಡ ನಮ್ಮ ಗ್ರಾಮದ ಸಾರ್ವಜನಿಕ ಸಂಪತ್ತು. ಯಾವುದೇ ಕಾರಣಕ್ಕೂ ಅದನ್ನು ಖಾಸಗಿ ಕಂಪನಿಯ ಪಾಲಾಗಲು ಬಿಡುವುದಿಲ್ಲ. ಲೀಸ್‌ಗೆ ನೀಡಿದ ಜಾಗಕ್ಕಿಂತ ಹೆಚ್ಚಿನ ಪ್ರದೇಶ ಒತ್ತುವರಿಯಾಗಿದ್ದರೆ ಕೂಡಲೇ ಸರ್ವೇ ನಡೆಸಿ ಸರ್ಕಾರಿ ಜಾಗವನ್ನು ವಾಪಸ್ ಪಡೆಯಬೇಕು. ಸರ್ಕಾರ ಮಾರಾಟಕ್ಕೆ ಮುಂದಾದರೆ ಹೋರಾಟ ಅನಿವಾರ್ಯ.
>
> – ಎಂ.ಎಸ್. ದೊಡ್ಡಗೌಡರ, ಗೊಜನೂರು ಗ್ರಾಮಸ್ಥ

ಸರ್ಕಾರಿ ಜಾಗ ಒತ್ತುವರಿಯಾಗಿದ್ದರೆ ಕೂಡಲೇ ತೆರವುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಉಳಿದ ಸರ್ಕಾರಿ ಗೋಮಾಳವನ್ನು ಯಾವುದೇ ಕಾರಣಕ್ಕೂ ಖಾಸಗಿ ಕಂಪನಿಗೆ ಮಾರಾಟ ಅಥವಾ ಹಸ್ತಾಂತರ ಮಾಡಬಾರದು.

ಉಪವಿಭಾಗಾಧಿಕಾರಿ ಕಚೇರಿಯ ಎಲ್‌ಎನ್‌ಡಿ ವಹಿ 17/2023–24ಕ್ಕೆ ಸಂಬಂಧಿಸಿದ ಜಮೀನು ಹಸ್ತಾಂತರ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸಿ, ಗ್ರಾಮಸ್ಥರ ಆಕ್ಷೇಪಣೆಗಳನ್ನು ಪರಿಗಣಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

### 'ಪ್ರಾಣ ಹೋದರೂ ಗುಡ್ಡ ಬಿಡಲ್ಲ'

ಗೋಮಾಳ ಗುಡ್ಡ ಗ್ರಾಮಸ್ಥರ ಸಾರ್ವಜನಿಕ ಸಂಪತ್ತಾಗಿದ್ದು, ಹಲವು ವರ್ಷಗಳಿಂದ ಜಾನುವಾರು ಸಾಕಾಣಿಕೆಗೆ ಆಧಾರವಾಗಿದೆ. ಹೀಗಾಗಿ ಗುಡ್ಡವನ್ನು ಖಾಸಗಿ ಕಂಪನಿಯ ಪಾಲಾಗಲು ಬಿಡುವುದಿಲ್ಲ ಎಂದು ಗ್ರಾಮಸ್ಥರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರಿ ಆಸ್ತಿ ಹಸ್ತಾಂತರದ ಪ್ರಕ್ರಿಯೆ ಮುಂದುವರಿದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಗೋಮಾಳ ಗುಡ್ಡದ ಪ್ರದೇಶದಲ್ಲಿ ವಿಂಡ್ ಟರ್ಬೈನ್‌ಗಳನ್ನು ಅಳವಡಿಸುವುದಕ್ಕೂ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ. ಇದೇ ಪ್ರದೇಶದ ಸಮೀಪ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ವಸತಿ ಯೋಜನೆಯ ಮನೆಗಳಿದ್ದು, ಟರ್ಬೈನ್‌ಗಳ ಅಳವಡಿಕೆಯಿಂದ ಜನವಸತಿ ಪ್ರದೇಶದ ಸುರಕ್ಷತೆಗೆ ತೊಂದರೆಯಾಗುವ ಆತಂಕವಿದೆ ಎಂದು ಆಕ್ಷೇಪಿಸಿದ್ದಾರೆ.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅವರು ಸ್ಥಳೀಯ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಎಸ್.ಪಿ. ಪಾಟೀಲ, ಎಸ್.ಡಿ. ಪಾಟೀಲ, ಮಾಂತಗೌಡ ಪಾಟೀಲ, ಮಾಂತೇಶ ಪ್ರಭಯ್ಯನಮಠ, ಬಸವರಾಜ ಸಂಶಿ, ಮಂಜುನಾಥ ಛಲವಾದಿ, ರಮೇಶ ದನದಮನಿ, ರೈತ ಮುಖಂಡರಾದ ಮಂಜುನಾಥ ಮಾಗಡಿ, ಚನ್ನಪ್ಪ ಷಣ್ಮುಕಿ, ಹೊನ್ನಪ್ಪ ವಡ್ಡರ, ನಿಂಬಣ್ಣ ಮಡಿವಾಳರ, ಚೇತನ ಕಣವಿ, ಮುತ್ತಪ್ಪ ನಡ್ಲಮನಿ ಸೇರಿದಂತೆ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಅವಳಿ ನಗರದ ವಿವಿಧೆಡೆ ನೀರು ಪೂರೈಕೆ

ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ಅ.9ರಂದು ವಿವಿಧ ವಾರ್ಡ್‌ಗಳ ಹಲವು ಪ್ರದೇಶಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ತಿಳಿಸಿದೆ.

**ನೀರು ಪೂರೈಕೆಯಾಗುವ ಪ್ರದೇಶಗಳು**

ವಾರ್ಡ್ ನಂ. 1ರ ಎಸ್.ಎಂ. ಕೃಷ್ಣಾ ನಗರ, ಹುಬ್ಬಳ್ಳಿಮಠ ರಸ್ತೆ ಹಾಗೂ 18 ಮೀ. ರಸ್ತೆ.

ವಾರ್ಡ್ ನಂ. 11ರ ಶಿವಬಸವ ನಗರ, ಹಾನಗಲ್ಲ ಬಾರ್ ಕೆಳಭಾಗದಿಂದ ಶುದ್ಧ ನೀರಿನ ಘಟಕದವರೆಗೆ.

ವಾರ್ಡ್ ನಂ. 21 ಮತ್ತು 23ರ ಮೇರವಾಡೆಯವರ ಲೈನ್, ಬೂಮಾ ಲೈನ್, ರಾಮದಾಸ ಚನ್ನಪ್ಪ ಲೈನ್, ಶಿವಪ್ಪ ಮಠದ ಲೈನ್, ಸ್ಮಶಾನ ಕಟ್ಟೆ ಭಾಗ 1 ಮತ್ತು 2, ಮುನವಳ್ಳಿ ಪ್ಲಾಟ್, ಅಕ್ಕಿ ಪ್ಲಾಟ್, ಕಮತರ ಪ್ಲಾಟ್ ಹಾಗೂ ಕರಿಬಿಷ್ಠಿ ಲೈನ್.

ವಾರ್ಡ್ ನಂ. 19, 24 ಮತ್ತು 25ರ ಮದ್ಲಿ ಓಣಿ ಹೊಸ ಲೈನ್, ವೀರನಾರಾಯಣ ಗುಡಿ ಲೈನ್, ಕೋನೇರಿ ಹೊಂಡ ಹಳೆ ಲೈನ್ ಹಾಗೂ ಬಾವಿ ಮೆಂಬರ್ ಲೈನ್.

ವಾರ್ಡ್ ನಂ. 22ರ ಗಂಗಿಮಡಿ ಲೈನ್ 1ರಿಂದ 5ರವರೆಗೆ.

ವಾರ್ಡ್ ನಂ. 34ರ ನಂದೀಶ್ವರ ನಗರ, 20ನೇ ನಂಬರ್ ಸ್ಕೂಲ್ ಹಾಗೂ ಕಳಸಾಪುರ ರಸ್ತೆ.

ವಾರ್ಡ್ ನಂ. 6ರ ಭಜಂತ್ರಿ ಓಣಿ, ಅಂಬೇಡ್ಕರ್ ನಗರ, ಹೂಲಿಯವರ ಲೈನ್, ಜಮಲಮ್ಮನ ಗುಡಿ ಲೈನ್ ಹಾಗೂ ಹಾದಿಮನಿ ಲೈನ್.

ತಾಂತ್ರಿಕ ಕಾರಣಗಳಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸುವಂತೆ ಗದಗ–ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೋಣ, ಗಜೇಂದ್ರಗಡ ಕರಡು ಮಹಾಯೋಜನೆಗೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅನ್ವಯ ರೋಣ ಹಾಗೂ ಗಜೇಂದ್ರಗಡ ಪಟ್ಟಣಗಳ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸಿದ್ಧಪಡಿಸಿರುವ ಉಖಖ ಆಧಾರಿತ ಕರಡು ಮಹಾಯೋಜನೆಗೆ ಸರ್ಕಾರ ತಾತ್ಕಾಲಿಕ ಅನುಮೋದನೆ ನೀಡಿದೆ.

ಎರಡೂ ಪಟ್ಟಣಗಳ ಕರಡು ಮಹಾಯೋಜನೆ ನಕ್ಷೆಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಸಂಬಂಧಪಟ್ಟ ಕಚೇರಿ ಹಾಗೂ ಆಯಾ ಪುರಸಭೆ ಕಾರ್ಯಾಲಯಗಳಲ್ಲಿ ಇರಿಸಲಾಗಿದೆ.

ಯೋಜನೆಯಿಂದ ಬಾಧಿತರಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳನ್ನು ದಿನಪತ್ರಿಕೆಯಲ್ಲಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 60 ದಿನಗಳೊಳಗೆ ಸಂಬಂಧಪಟ್ಟ ಕಚೇರಿಗೆ ಖುದ್ದಾಗಿ, ನೋಂದಾಯಿತ ಅಂಚೆ ಅಥವಾ ಇ–ಮೇಲ್ ಮೂಲಕ ಸಲ್ಲಿಸಬಹುದು. ನಿಗದಿತ ಅವಧಿ ಮುಗಿದ ಬಳಿಕ ಸಲ್ಲಿಕೆಯಾಗುವ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಸಂಬಂಧಪಟ್ಟ ಯೋಜನಾ ಪ್ರಾಧಿಕಾರದ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

## ಇಂದು 'ಕಾಲೇಜು ರಂಗ' ಬಿಡುಗಡೆ

ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕೊಪ್ಪಳದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸಾ ಕೋಶದ ಸಹಯೋಗದಲ್ಲಿ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ 'ಕಾಲೇಜು ರಂಗ' ಅ.9ರಂದು ಶುಕ್ರವಾರ ಬೆಳಗ್ಗೆ 10.30ಕ್ಕೆ ಬಿಡುಗಡೆಯಾಗಲಿದೆ.

ಪತ್ರಕರ್ತೆ ಹಾಗೂ ಚಲನಚಿತ್ರ ಅಕಾಡೆಮಿ ಸದಸ್ಯೆ ಸಾವಿತ್ರಿ ಮುಜುಂದಾರ್ ಕಾರ್ಯಕ್ರಮ ಉದ್ಘಾಟಿಸಿ ಪತ್ರಿಕೆ ಬಿಡುಗಡೆ ಮಾಡಲಿದ್ದಾರೆ. ಹಿರಿಯ ಪತ್ರಕರ್ತ ಪ್ರಮೋದ್ ಕುಲಕರ್ಣಿ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ, ಸಹಾಯಕ ಪ್ರಾಧ್ಯಾಪಕಿ ಸುಧಾ ಹೆಗಡೆ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

### ನೀರು-ಮೇವಿನ ಕೊರತೆಯಾಗದಂತೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಕಟ್ಟುನಿಟ್ಟಿನ ಸೂಚನೆ

## ಬರದ ಬಿಸಿ ಹೆಚ್ಚುವ ಮುನ್ನ ಎಚ್ಚೆತ್ತುಕೊಳ್ಳಿ



ವಿಜಯಸಾಕ್ಷಿ ಸುದ್ದಿ, ಗದಗ

ಹಿಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿ ಎದುರಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಜನರು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ಕೊರತೆಯಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಮತ್ತು ಮೇವಿನ ಲಭ್ಯತೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಅಗತ್ಯ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ತಾಲೂಕುವಾರು ನೀರಿನ ಸಮಸ್ಯೆ ಇರುವ ಗ್ರಾಮಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸೂಚಿಸಿದ ಜಿಲ್ಲಾಧಿಕಾರಿ, ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು. ಜಲಾಶಯಗಳಿಂದ ನೀರು ಬಿಡುವ ಮುನ್ನ ಜಿಲ್ಲಾಧಿಕಾರಿಗಳ ಗಮನಕ್ಕೆ ತರುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜನರು ಮತ್ತು ಜಾನುವಾರುಗಳಿಗೆ ಸಾಕಷ್ಟು ಕುಡಿಯುವ ನೀರು ಹಾಗೂ ಅಗತ್ಯ ಮೇವು ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಜಲ ಜೀವನ್ ಮಿಷನ್ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ತ್ವರಿತವಾಗಿ ಹಾಗೂ ಗುಣಮಟ್ಟದಿಂದ ಪೂರ್ಣಗೊಳಿಸಿ ಪ್ರತಿಯೊಂದು ಮನೆಗೂ ನಲ್ಲಿ ನೀರು ತಲುಪಿಸುವಂತೆ ಸೂಚಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರಹಿತರಿಗೆ ನಿವೇಶನ ಒದಗಿಸಲು ಭೂಮಿ ಲಭ್ಯತೆ ಕುರಿತು ತಹಸೀಲ್ದಾರ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ನೀಡಿರುವ ವರದಿಗಳನ್ನು ಪರಿಶೀಲಿಸಿ, ಅಗತ್ಯ ಭೂ ಸುಧಾರಣೆ ಹಾಗೂ ಲೆವೆಲಿಂಗ್ ನಡೆಸಿ ನಿವೇಶನ ಜಾಗ ಒದಗಿಸುವಂತೆ ನಿರ್ದೇಶಿಸಿದರು. ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಹಾಗೂ ಜಿಲ್ಲೆಯ ಅಂತರ್ಜಲ ಮಟ್ಟದ ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿ, ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಕೆ ಮಾಡುವಂತೆ ಸೂಚಿಸಿದರು. ಕೆರೆಗಳ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ತಪಾಸಣೆ ಮಾಡುವಂತೆಯೂ ನಿರ್ದೇಶಿಸಿದರು.

ತೋಟಗಾರಿಕೆ ಇಲಾಖೆ ಕಾರ್ಯಕ್ರಮಗಳು ಹಾಗೂ ವಿಬಿಜಿ–ರಾಮ್‌ಜಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದ ಅವರು, ನಿಗದಿತ ಅವಧಿಯಲ್ಲಿ ಗುರಿ ಸಾಧಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ ಮಾತನಾಡಿ, ತಾಲೂಕುವಾರು ಗ್ರಾಮೀಣ ಉದ್ಯೋಗ ಖಾತ್ರಿ ಹಾಗೂ ವಿಬಿಜಿ–ರಾಮ್‌ಜಿ ಕಾಮಗಾರಿಗಳ ಪ್ರಗತಿ ವಿವರಿಸಿದರು. ಜಲಮೂಲಗಳ ಪುನಶ್ಚೇತನ ಹಾಗೂ ಕೆರೆ ಹೂಳೆತ್ತುವ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಮಾಹಿತಿ ನೀಡಿದರು. ತಾಲೂಕು ಮಟ್ಟದಲ್ಲಿ ತಹಸೀಲ್ದಾರ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಸಮನ್ವಯದೊಂದಿಗೆ ಅರ್ಹ ಫಲಾನುಭವಿಗಳಿಗೆ ನಿವೇಶನ ಒದಗಿಸಲು ಭೂಮಿ ಗುರುತಿಸುವಿಕೆ ಹಾಗೂ ಸರ್ವೆ ಕಾರ್ಯ ಚುರುಕಿನಿಂದ ನಡೆಯುತ್ತಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ಜಿಲ್ಲೆಯಲ್ಲಿ ಜೋಳದ ಕೊಯ್ಲು ಕಾರ್ಯಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ರೈತರಿಗೆ ಅಗತ್ಯ ಮಾಹಿತಿ ಹಾಗೂ ಬೆಂಬಲ ನೀಡಲಾಗುತ್ತಿದೆ ಎಂದು ತಿಳಿಸಿದರು. ಸೆಪ್ಟೆಂಬರ್‌ನಲ್ಲಿ ವಾಡಿಕೆಗಿಂತ ಮಳೆ ಕಡಿಮೆಯಾಗಿದ್ದರೂ, ಅಕ್ಟೋಬರ್‌ನಲ್ಲಿ ಮಳೆಯ ಪ್ರಮಾಣ ಚೇತರಿಸಿಕೊಂಡು ಶೇ.90ರಷ್ಟು ಪ್ರಗತಿ ಕಂಡಿದೆ ಎಂದರು.

> ಬರ ಪರಿಸ್ಥಿತಿ ತೀವ್ರಗೊಳ್ಳುವವರೆಗೆ ಕಾಯದೆ ಈಗಿನಿಂದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ನೀರು, ಮೇವು ಹಾಗೂ ಜಲಮೂಲಗಳ ನಿರ್ವಹಣೆಯಲ್ಲಿ ಯಾವುದೇ ಲೋಪವಾಗದಂತೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು.
>
> – ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ

ಜಂಟಿ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಶೇ.99ರಷ್ಟು ಸಾಧನೆಯಾಗಿದ್ದು, ಮಿಸ್‌ಮ್ಯಾಚ್ ಪ್ರಕರಣಗಳು ಹಾಗೂ ಬೆಳೆ ಹಾನಿ ಸಮೀಕ್ಷೆಯನ್ನು ನಿಗದಿತ ದಿನಾಂಕದೊಳಗೆ ಪೂರ್ಣಗೊಳಿಸಿ ಅರ್ಹ ರೈತರಿಗೆ ಪರಿಹಾರ ದೊರಕಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಪಿಎಂ ಕಿಸಾನ್ ಯೋಜನೆಯಡಿ ಉಳಿದಿರುವ ಅರ್ಹ ರೈತರು ತಕ್ಷಣ ಇ–ಕೆವೈಸಿ ಪೂರ್ಣಗೊಳಿಸುವಂತೆ ಮನವಿ ಮಾಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರ್ಗೇಶ್ ಕೆ.ಆರ್., ಉಪ ವಿಭಾಗಾಧಿಕಾರಿ ಗಂಗಪ್ಪ ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಎಲ್ಲ ತಾಲೂಕುಗಳ ತಹಸೀಲ್ದಾರ್‌ಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಂಭ್ರಮದ ನಡುವೆ 'ಲಕ್ಷ್ಮೇಶ್ವರ ಕಾ ರಾಜಾ' ಗಣೇಶ ವಿಸರ್ಜನೆ

ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸೊಪ್ಪಿನಕೇರಿ ಓಣಿಯಲ್ಲಿ ಸನಾತನ ಹಿಂದೂ ಯುವಕ ಮಂಡಳಿ ಪ್ರತಿಷ್ಠಾಪಿಸಿದ್ದ 'ಲಕ್ಷ್ಮೇಶ್ವರ ಕಾ ರಾಜಾ' ಗಣೇಶನ ವಿಸರ್ಜನೆ ಬುಧವಾರ ಅದ್ದೂರಿಯಾಗಿ ನೆರವೇರಿತು.



ಸಾವಿರಾರು ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ಡಿಜೆ ಹಾಡುಗಳಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಕೇಸರಿ ಬಾವುಟಗಳೊಂದಿಗೆ ಗಣೇಶನ ಘೋಷಣೆಗಳು ಮೊಳಗಿದವು.

ಮೆರವಣಿಗೆ ಬಜಾರ್ ಪ್ರದೇಶಕ್ಕೆ ಆಗಮಿಸಿದ ವೇಳೆ ಹುಬ್ಬಳ್ಳಿಯ ಶಿವಾ ಹಿಂದೂ ಕಾರ್ಯಕರ್ತರು ಗಣೇಶನ ಮೂರ್ತಿ ಎದುರು ಗಂಗಾರತಿ ಹಾಗೂ ಮಹಾಮಂಗಳಾರತಿ ನೆರವೇರಿಸಿದರು. ಮೆರವಣಿಗೆಯುದ್ದಕ್ಕೂ ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಗಣೇಶ ವಿಸರ್ಜನೆ ಹಿನ್ನೆಲೆಯಲ್ಲಿ ಪೊಲೀಸರು ಅಗತ್ಯ ಬಂದೋಬಸ್ತ್ ಕೈಗೊಂಡಿದ್ದರು. ಬಳಿಕ ಪಟ್ಟಣದ ಇತಿಹಾಸ ಪ್ರಸಿದ್ಧ ಅಗಸ್ತ್ಯತೀರ್ಥದ ಪುಷ್ಕರಣಿಯಲ್ಲಿ ಗಣೇಶ ಮೂರ್ತಿಯ ವಿಸರ್ಜನೆ ನೆರವೇರಿಸಲಾಯಿತು.

## ಯುವಶಕ್ತಿಯಿಂದ ಪ್ರಜಾಪ್ರಭುತ್ವಕ್ಕೆ ಮತ್ತಷ್ಟು ಬಲ: ನಂದಾ



ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಯುವಜನರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ಹಕ್ಕುಗಳು ಹಾಗೂ ಸಂವಿಧಾನದ ಮೂಲ ಆಶಯಗಳ ಕುರಿತು ಅರಿವು ಮೂಡಿಸಿ, ಭವಿಷ್ಯದ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುವುದು ಯುವ ಸಂಸತ್ತಿನ ಉದ್ದೇಶವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ನಂದಾ ಹಣಬರಟ್ಟಿ ಹೇಳಿದರು.

ಶಿರಹಟ್ಟಿಯ ತಾಲೂಕು ಪಂಚಾಯಿತಿ ಸಭಾಭವನದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಯುವ ಸಂಸತ್ತು ಚರ್ಚಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರು ಕೇವಲ ಮತದಾರರಾಗದೆ ಪ್ರಜಾಪ್ರಭುತ್ವದ ಬಲವರ್ಧನೆಗೆ ತಮ್ಮದೇ ಕೊಡುಗೆ ನೀಡಬೇಕು. ಸಂಸತ್ತು ಮತ್ತು ವಿಧಾನಸಭೆಯ ಕಲಾಪ, ಚರ್ಚೆ ಹಾಗೂ ಪ್ರಶ್ನೋತ್ತರ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ಪ್ರಾಯೋಗಿಕವಾಗಿ ತಿಳಿದುಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ವಿವಿಧ ಕಾಲೇಜುಗಳ 112ಕ್ಕೂ ಹೆಚ್ಚು ವಿದ್ಯಾರ್ಥಿಗಳು ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ವಿಧಾನಸಭೆಯ ಅಣಕು ಕಲಾಪದಲ್ಲಿ ಸಭಾಪತಿ, ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕರು ಭಾಗವಹಿಸುವ ರೀತಿಯನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ನೀರಾವರಿ ಮತ್ತು ಅದರ ಸದ್ಬಳಕೆ, ಬರಗಾಲಕ್ಕೆ ಪರಿಹಾರ ಹಾಗೂ ಸಂವಿಧಾನದ ಮೂಲಭೂತ ಹಕ್ಕುಗಳ ಕುರಿತು ಚರ್ಚೆ ನಡೆಸಿದರು. ಸಮಾಜ ಕಲ್ಯಾಣಾಧಿಕಾರಿ ಗೋಪಾಲ ನಾಯ್ಕ, ಬಿಇಒ ಶಿವರಾಜ ಶಿಮೀಕೇರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಉಮೇಶ ಅರಹುಣಸಿ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಬಿ.ಜಿ. ಗಿರಿತಿಮ್ಮಣ್ಣವರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದರು.

## ಕರ್ನಾಟಕ ಯುರಾಲಜಿ ಸಂಘದ ಅಧ್ಯಕ್ಷರಾಗಿ ಡಾ. ಶರಣಬಸವೇಶ್ ಆಲೂರ್

ವಿಜಯಸಾಕ್ಷಿ ಸುದ್ದಿ, ಗದಗ



ಮೂತ್ರಪಿಂಡ ಹಾಗೂ ಮೂತ್ರರೋಗ ಶಸ್ತ್ರಚಿಕಿತ್ಸಕ ಡಾ. ಶರಣಬಸವೇಶ್ ಬಿ. ಆಲೂರ್ ಅವರು ಪ್ರಸಕ್ತ ಸಾಲಿನ ಕರ್ನಾಟಕ ಯುರಾಲಜಿ ಸಂಘದ ಚುನಾಯಿತ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಗದಗ ನಗರದಲ್ಲಿ ಇತ್ತೀಚೆಗೆ ನಡೆದ 31ನೇ ರಾಜ್ಯಮಟ್ಟದ ಕರ್ನಾಟಕ ಯುರಾಲಜಿ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ನಡೆದ ಚುನಾವಣೆಯಲ್ಲಿ ಡಾ. ಶರಣಬಸವೇಶ್ ಆಲೂರ್ ಅವರನ್ನು ಮುಂದಿನ ಸಾಲಿನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ರಾಜ್ಯದ ಮೂತ್ರರೋಗ ತಜ್ಞರನ್ನು ಒಳಗೊಂಡಿರುವ ಕರ್ನಾಟಕ ಯುರಾಲಜಿ ಸಂಘವು ಮೂತ್ರಪಿಂಡ ಹಾಗೂ ಮೂತ್ರನಾಳಕ್ಕೆ ಸಂಬಂಧಿಸಿದ ಕಾಯಿಲೆಗಳ ಕುರಿತು ಅರಿವು ಮೂಡಿಸುವುದು, ವೈದ್ಯಕೀಯ ಶಿಕ್ಷಣ ಹಾಗೂ ತಜ್ಞರ ವೃತ್ತಿಪರ ಬೆಳವಣಿಗೆಗೆ ಪೂರಕವಾದ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಶರಣಬಸವೇಶ್ ಆಲೂರ್ ಅವರಿಗೆ ವೈದ್ಯಕೀಯ ಕ್ಷೇತ್ರದ ಗಣ್ಯರು, ಸಹೋದ್ಯೋಗಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ರಾಜವೈಭವದಿಂದ ನಾಡಹಬ್ಬದವರೆಗೆ ಬೆಳೆದು ಬಂದ ಕರ್ನಾಟಕದ ಸಾಂಸ್ಕೃತಿಕ ಹೆಮ್ಮೆ

# ಮೈಸೂರು ದಸರಾ – ಪರಂಪರೆ, ಇತಿಹಾಸ ಮತ್ತು ವೈಭವ

ಭಾರತೀಯ ಹಬ್ಬಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ. ಅವು ನಮ್ಮ ಇತಿಹಾಸ, ಸಂಸ್ಕೃತಿ, ಪರಂಪರೆ ಹಾಗೂ ಮಾನವೀಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜೀವಂತ ಮಾಧ್ಯಮಗಳು. ಈ ಪರಂಪರೆಯ ವೈಭವಕ್ಕೆ ಮೈಸೂರು ದಸರಾ ಅತ್ಯುತ್ತಮ ಉದಾಹರಣೆ.

ನವರಾತ್ರಿ ಹಾಗೂ ವಿಜಯದಶಮಿಯನ್ನು ಒಳಗೊಂಡ ಹತ್ತು ದಿನಗಳ ದಸರಾ ಹಬ್ಬವು ಧರ್ಮದ ವಿಜಯ, ದುಷ್ಟಶಕ್ತಿಯ ಸಂಹಾರ ಮತ್ತು ಸತ್ಯದ ಗೆಲುವಿನ ಸಂಕೇತವಾಗಿದೆ. ಮೈಸೂರಿನ ದಸರಾ ಚಾಮುಂಡೇಶ್ವರಿ ದೇವಿಯ ಮಹಿಷಾಸುರ ಸಂಹಾರದ ಪೌರಾಣಿಕ ಹಿನ್ನೆಲೆಯೊಂದಿಗೆ ವಿಶೇಷ ನಂಟು ಹೊಂದಿದೆ.

ನವರಾತ್ರಿಯ ಒಂಬತ್ತು ದಿನಗಳಲ್ಲಿ ದೇವಿಯನ್ನು ವಿವಿಧ ಶಕ್ತಿರೂಪಗಳಲ್ಲಿ ಆರಾಧಿಸಲಾಗುತ್ತದೆ. ದುರ್ಗಾಷ್ಟಮಿ, ಆಯುಧ ಪೂಜೆ ಹಾಗೂ ವಿಜಯದಶಮಿಯ ಆಚರಣೆಗಳು ಹಬ್ಬದ ಧಾರ್ಮಿಕ ಮಹತ್ವವನ್ನು ಹೆಚ್ಚಿಸುತ್ತವೆ.

### ವಿಜಯನಗರದ ಪರಂಪರೆ, ಒಡೆಯರ ರಾಜವೈಭವ

ಮೈಸೂರು ದಸರೆಯ ಇತಿಹಾಸ ಹಲವು ಶತಮಾನಗಳಷ್ಟು ಹಳೆಯದು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ವೈಭವದಿಂದ ಆಚರಿಸಲಾಗುತ್ತಿದ್ದ ದಸರಾ ಪರಂಪರೆ ಮುಂದೆ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಮತ್ತಷ್ಟು ವಿಜೃಂಭಿಸಿತು. 1610ರಲ್ಲಿ ರಾಜ ಒಡೆಯರ್ ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆಗೆ ಚಾಲನೆ ನೀಡಿದರು. ನಂತರ ಮೈಸೂರು ರಾಜಧಾನಿಯಾದ ಬಳಿಕ ಉತ್ಸವವು ರಾಜವೈಭವದ ಪ್ರಮುಖ ಸಂಕೇತವಾಯಿತು.

1799ರಲ್ಲಿ ಶ್ರೀರಂಗಪಟ್ಟಣದ ಪತನದ ಬಳಿಕ ಮೈಸೂರು ರಾಜಧಾನಿಯಾದ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಸರಾ ಆಚರಣೆಗೆ ಹೊಸ ರೂಪ ದೊರೆಯಿತು. ದೇವಿ ಆರಾಧನೆ, ಆಯುಧ ಪೂಜೆ, ರಾಜದರ್ಬಾರ್, ಮಲ್ಲಯುದ್ಧ, ಸಂಗೀತ, ನೃತ್ಯ ಹಾಗೂ ವಿಜಯದಶಮಿ ಮೆರವಣಿಗೆಗಳು ಅಂದಿನ ಪ್ರಮುಖ ಆಕರ್ಷಣೆಗಳಾಗಿದ್ದವು.

### ಚಾಮುಂಡೇಶ್ವರಿ ಮತ್ತು ಜಂಬೂಸವಾರಿ

ದಸರೆಯ ಧಾರ್ಮಿಕ ಕೇಂದ್ರವೇ ಚಾಮುಂಡಿ ಬೆಟ್ಟ. ನವರಾತ್ರಿಯ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಹಾಗೂ ಅಲಂಕಾರಗಳು ನಡೆಯುತ್ತವೆ. ವಿಜಯದಶಮಿಯಂದು ದೇವಿಯನ್ನು ಅಪರಾಜಿತೆಯ ರೂಪದಲ್ಲಿ ಆರಾಧಿಸಲಾಗುತ್ತದೆ.

ಮೈಸೂರಿನ ದಸರೆಯ ಜಗದ್ವಿಖ್ಯಾತ ಆಕರ್ಷಣೆ ಜಂಬೂಸವಾರಿ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಹೊತ್ತು ಅಲಂಕೃತ ಗಜರಾಜರು ಸಾಗುವ ದೃಶ್ಯ ಕಣ್ಮನ ಸೆಳೆಯುತ್ತದೆ. ವಿವಿಧ ಕಲಾತಂಡಗಳು, ಜನಪದ ಕಲಾವಿದರು, ಸ್ತಬ್ಧಚಿತ್ರಗಳು ಹಾಗೂ ಪೊಲೀಸ್ ಬ್ಯಾಂಡ್ ಮೆರವಣಿಗೆಯ ವೈಭವವನ್ನು ಮತ್ತಷ್ಟು ಹೆಚ್ಚಿಸುತ್ತವೆ.







### ಅರಮನೆ ದಸರಾ ಮತ್ತು ನಾಡಹಬ್ಬ

ರಾಜಮನೆತನದ ಆಡಳಿತ ಅಂತ್ಯವಾದ ಬಳಿಕ ದಸರಾ ಆಚರಣೆಯಲ್ಲಿ ಬದಲಾವಣೆ ಕಂಡುಬಂದರೂ, ಅರಮನೆಯೊಳಗಿನ ಖಾಸಗಿ ದರ್ಬಾರ್, ಆಯುಧ ಪೂಜೆ, ಸರಸ್ವತಿ ಪೂಜೆ, ಶಮೀಪೂಜೆ ಸೇರಿದಂತೆ ಸಾಂಪ್ರದಾಯಿಕ ಆಚರಣೆಗಳು ಮುಂದುವರಿದಿವೆ. ದಸರಾ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೆರೆಯುವ ರತ್ನಖಚಿತ ಸ್ವರ್ಣಸಿಂಹಾಸನವೂ ಅರಮನೆಯ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ.

ಕರ್ನಾಟಕ ಸರ್ಕಾರ ಆಯೋಜಿಸುವ ನಾಡಹಬ್ಬ ದಸರಾ ಸಾರ್ವಜನಿಕರ ಪಾಲ್ಗೊಳ್ಳುವಿಕೆಯಿಂದ ಮತ್ತಷ್ಟು ಜನಪ್ರಿಯವಾಗಿದೆ.

ಯುವ ದಸರಾ, ಯುವ ಸಂಭ್ರಮ, ಕೃಷಿ ಮತ್ತು ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಮಕ್ಕಳ ದಸರಾ, ಕವಿಗೋಷ್ಠಿ, ಸಂಗೀತ ಕಾರ್ಯಕ್ರಮ, ನಾಟಕ ಹಾಗೂ ಚಲನಚಿತ್ರೋತ್ಸವಗಳು ಉತ್ಸವಕ್ಕೆ ವೈವಿಧ್ಯ ತುಂಬುತ್ತವೆ. ಗೊಂಬೆ ಪ್ರದರ್ಶನವೂ ಶತಮಾನಗಳ ಪರಂಪರೆಯನ್ನು ಜೀವಂತವಾಗಿರಿಸಿದೆ.

ಈ ಬಾರಿ ಕರಾವಳಿಯ ಕೃಷಿ ಸಂಸ್ಕೃತಿಯ ಪ್ರತೀಕವಾದ ಕಂಬಳವೂ ದಸರೆಯ ವಿಶೇಷ ಆಕರ್ಷಣೆಯಾಗುತ್ತಿದೆ.

ಇದರೊಂದಿಗೆ ಮೈಸೂರು ದಸರಾ ಕರ್ನಾಟಕದ ವಿವಿಧ ಭಾಗಗಳ ಸಂಸ್ಕೃತಿ ಮತ್ತು ಜನಪದ ಪರಂಪರೆಗಳನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ ಉತ್ಸವವಾಗಿ ರೂಪುಗೊಳ್ಳುತ್ತಿದೆ.

ದಸರಾ ಸಂದರ್ಭದಲ್ಲಿ ಮೈಸೂರು ನಗರ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುವುದು ಮತ್ತೊಂದು ವಿಶೇಷ. ಅರಮನೆ, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳು ಬೆಳಕಿನ ಅಲಂಕಾರದಿಂದ ಮಿಂಚಿ, ದೇಶ–ವಿದೇಶಗಳಿಂದ ಆಗಮಿಸುವ ಪ್ರವಾಸಿಗರನ್ನು ಆಕರ್ಷಿಸುತ್ತವೆ.

### ಪಂಜಿನ ಕವಾಯತು

ವಿಜಯದಶಮಿಯಂದು ಜಂಬೂಸವಾರಿಯ ಬಳಿಕ ಬನ್ನಿಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ದಸರೆಯ ಅಂತಿಮ ಆಕರ್ಷಣೆ. ಪೊಲೀಸ್ ಪಡೆಗಳ ಕವಾಯತು, ಅಶ್ವಾರೋಹಿ ದಳದ ಸಾಹಸ ಪ್ರದರ್ಶನ, ಮೋಟಾರ್‌ಸೈಕಲ್ ಸಾಹಸ, ಪೊಲೀಸ್ ಬ್ಯಾಂಡ್ ಹಾಗೂ ಪಂಜುಗಳ ಬೆಳಕು ಉತ್ಸವಕ್ಕೆ ರೋಮಾಂಚನ ತುಂಬುತ್ತವೆ.

> ಮೈಸೂರು ದಸರಾ ಧರ್ಮ, ಇತಿಹಾಸ, ರಾಜಪರಂಪರೆ, ಕಲೆ, ಸಂಗೀತ, ಜನಪದ ಸಂಸ್ಕೃತಿ ಮತ್ತು ಜನಪಾಲ್ಗೊಳ್ಳುವಿಕೆಯ ಅಪೂರ್ವ ಸಂಗಮ. ವಿಜಯನಗರದ ಪರಂಪರೆಯಿಂದ ಒಡೆಯರ ರಾಜವೈಭವದವರೆಗೆ ಹಾಗೂ ಅಲ್ಲಿಂದ ಇಂದಿನ ನಾಡಹಬ್ಬದ ರೂಪದವರೆಗೆ ಬೆಳೆದು ಬಂದಿರುವ ಈ ಉತ್ಸವ ಕರ್ನಾಟಕದ ಸಾಂಸ್ಕೃತಿಕ ಹೆಮ್ಮೆಯ ಪ್ರತೀಕವಾಗಿದೆ. ಬನ್ನಿ, ನಾಡಹಬ್ಬ ದಸರೆಯ ವೈವಿಧ್ಯಮಯ ವೈಭವವನ್ನು ಕಣ್ತುಂಬಿಕೊಂಡು, ನಮ್ಮ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸೋಣ.
>
> – ಡಾ. ಶಾಲಿನಿ ರಜನೀಶ್
> ಸರ್ಕಾರದ ಮುಖ್ಯ ಕಾರ್ಯದರ್ಶಿ

# ಮಹಾಲಯ ಅಮಾವಾಸ್ಯೆಗೆ 50 ಹೆಚ್ಚುವರಿ ವಿಶೇಷ ಬಸ್

**ವಿಜಯಸಾಕ್ಷಿ ಸುದ್ದಿ, ಗದಗ**

2026ನೇ ಸಾಲಿನ ಮಹಾಲಯ ಅಮಾವಾಸ್ಯೆ ಹಬ್ಬದ ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಸುಮಾರು 50 ಹೆಚ್ಚುವರಿ ವಿಶೇಷ ಬಸ್‌ಗಳನ್ನು ಕಾರ್ಯಾಚರಣೆಗೆ ನಿಯೋಜಿಸಲು ನಿರ್ಧರಿಸಿದೆ.

ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಹಾಗೂ ಬಾಗಲಕೋಟೆ ವಿಭಾಗಗಳಿಂದ ಹೆಚ್ಚುವರಿ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುವುದು.

ಅಕ್ಟೋಬರ್ 9ರಂದು ಶುಕ್ರವಾರ, ಅಕ್ಟೋಬರ್ 10ರಂದು ಎರಡನೇ ಶನಿವಾರ, ಮಹಾಲಯ ಅಮಾವಾಸ್ಯೆ ಹಾಗೂ ಅಕ್ಟೋಬರ್ 11ರಂದು ಭಾನುವಾರ ಇರುವ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಉತ್ತರ ಕರ್ನಾಟಕದ ತಮ್ಮ ಊರುಗಳಿಗೆ ತೆರಳುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 9ರಂದು ಬೆಂಗಳೂರಿನಿಂದ ಉತ್ತರ ಕರ್ನಾಟಕದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಪ್ರಯಾಣಿಕರು ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಸುಖಕರ ಮತ್ತು ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್‌ಗಳಲ್ಲಿ ಸಂಚರಿಸುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

# ಪಶ್ಚಿಮ ಪದವೀಧರ ಕ್ಷೇತ್ರ: ಉಮೇದುವಾರಿಕೆ ಹಿಂಪಡೆಯಲು ಇಂದು ಕೊನೆಯ ದಿನ

**ವಿಜಯಸಾಕ್ಷಿ ಸುದ್ದಿ, ಧಾರವಾಡ**

ಕರ್ನಾಟಕ ಪಶ್ಚಿಮ ಪದವೀಧರ ಮತ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಸೆ.29ರಿಂದ ಅ.6ರವರೆಗೆ ಒಟ್ಟು 18 ಅಭ್ಯರ್ಥಿಗಳಿಂದ 36 ನಾಮಪತ್ರಗಳು ಸಲ್ಲಿಕೆಯಾಗಿವೆ. ಬುಧವಾರ ನಾಮಪತ್ರಗಳ ಪರಿಶೀಲನೆ ನಡೆದಿದ್ದು, ಉಮೇದುವಾರಿಕೆಯನ್ನು ಹಿಂಪಡೆಯಲು ಅಕ್ಟೋಬರ್ 9 ಕೊನೆಯ ದಿನವಾಗಿದೆ.

ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಕರ್ನಾಟಕ ಪಶ್ಚಿಮ ಪದವೀಧರ ಮತ ಕ್ಷೇತ್ರದ ಚುನಾವಣಾಧಿಕಾರಿ ಕೆ.ಎಂ. ಜಾನಕಿ ಅವರು ನಾಮಪತ್ರಗಳ ಪರಿಶೀಲನೆ ನಡೆಸಿದರು. ಈ ವೇಳೆ ಧಾರವಾಡ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹಾಗೂ ಚುನಾವಣಾ ವೀಕ್ಷಕ ಮನೋಜ್ ಜೈನ್ ಉಪಸ್ಥಿತರಿದ್ದರು.

ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾಗಿ ಹುಬ್ಬಳ್ಳಿಯ ಮೋಹನ ಲಿಂಬಿಕಾಯಿ ಅವರು ಕಾಂಗ್ರೆಸ್‌ನಿಂದ ಹಾಗೂ ಗದಗ ಜಿಲ್ಲೆಯ ಸಂಕನೂರ ಎಸ್.ವಿ. ಅವರು ಬಿಜೆಪಿಯಿಂದ ನಾಮಪತ್ರ ಸಲ್ಲಿಸಿದ್ದಾರೆ.

ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾಗಿ ಹಾವೇರಿ ಜಿಲ್ಲೆಯ ನಿಶಾಂತ ಶಂಕರ ಬಂಕಾಪೂರ ಅವರು ಕರ್ನಾಟಕ ರಾಷ್ಟ್ರ ಸಮಿತಿ, ಧಾರವಾಡ ಜಿಲ್ಲೆಯ ಮಲ್ಲಿಕಾರ್ಜುನ ಚನ್ನಪ್ಪ ಗಂಗಾಧರ ಅವರು ಕಿತ್ತೂರ ಕಲ್ಯಾಣ ಕರ್ನಾಟಕ ಸೇನಾ ಹಾಗೂ ಹಾವೇರಿ ಜಿಲ್ಲೆಯ ತಳವಾರ ಶಿವಕುಮಾರ ಅವರು ಜನತಾ ಚಳುವಳಿ ಭಾರತ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಗಳಾಗಿ ಧಾರವಾಡದ ಅಬ್ದುಲ್ ಮನ್ನಾನ, ಕಾಂತಕುಮಾರ ಆರ್., ಹುಬ್ಬಳ್ಳಿಯ ಇಮ್ರಾನ ಕೂಡಲ, ಬಸವರಾಜ ಶಂಕರಪ್ಪ ಕೊಟಗಿ, ಬೆಂಗಳೂರಿನ ಡಾ. ಜಿ.ಎಚ್. ಇಮ್ರಾಪೂರ, ಹಾವೇರಿಯ ಉಮೇಶ ಕೃಷ್ಣಪ್ಪ ದೈವಜ್ಞ, ಆರ್.ಎಂ. ಕುಬೇರಪ್ಪ, ಜೀಶಾನ ಅಹ್ಮದಖಾನ ಪಠಾಣ, ಸಲೀಮ ಮಹ್ಮದ್ ಹನೀಫ್ ಜವಳಿ, ಸುರೇಶ ಎಸ್. ಬಿಷ್ಟನಗೌಡರ, ಶಿರಸಿಯ ಕೃಷ್ಣ ಎಚ್. ಬಳೆಗಾರ, ಗದಗದ ಜಿಶಾನ ಡಿ. ಸಿರಸಂಗಿ, ಸಂತೋಷ ಮನೋಹರ ವೆರ್ಣೇಕರ್ ಸೇರಿದಂತೆ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಉಮೇದುವಾರಿಕೆಯನ್ನು ಹಿಂಪಡೆಯಲು ಅ.9 ಕೊನೆಯ ದಿನವಾಗಿದ್ದು, ನಂತರ ಕಣದಲ್ಲಿರುವ ಅಂತಿಮ ಅಭ್ಯರ್ಥಿಗಳ ಸಂಖ್ಯೆ ಸ್ಪಷ್ಟವಾಗಲಿದೆ.

# ನಾಳೆ ಜೀವನ ದರ್ಶನ 63ನೇ ಮಾಲಿಕೆ

**ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ ವತಿಯಿಂದ 'ಜೀವನ ದರ್ಶನ' 63ನೇ ಮಾಲಿಕೆಯ ಕಾಶೀ ವಿಶ್ವನಾಥನ ಪಾಲಕಿ ಸೇವೆ ಕಾರ್ಯಕ್ರಮ ಅ.10ರಂದು ಶನಿವಾರ ಸಂಜೆ 6.30ಕ್ಕೆ ನಡೆಯಲಿದೆ. ಶಿರೋಳ–ಭೈರನಹಟ್ಟಿಯ ತೋಂಟದಾರ್ಯ ಮಠ ಹಾಗೂ ದೊರೆಸ್ವಾಮಿ ವಿರಕ್ತಮಠದ ಪೂಜ್ಯ ಶಾಂತಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಗದಗ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಂಪನ್ಮೂಲ ವ್ಯಕ್ತಿ ಕವಿತಾ ಬಸವರಾಜ ದಂಡಿನ ಅವರು 'ಮಹಿಳೆಯರು ಮತ್ತು ಹಬ್ಬ ಹರಿದಿನಗಳು' ವಿಷಯ ಕುರಿತು ಉಪನ್ಯಾಸ ನೀಡುವರು. ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಎ.ಟಿ. ನರೇಗಲ್ ಅಧ್ಯಕ್ಷತೆ ವಹಿಸುವರು. ಉಪಾಧ್ಯಕ್ಷ ಆರ್.ಆರ್. ಕಾಶಪ್ಪನವರ ಉಪಸ್ಥಿತರಿರುವರು. ಸಹಕಾರ ಸೇವಾ ರತ್ನ ಪುರಸ್ಕೃತ ಸಿ.ಕೆ. ಮಾಳಶೆಟ್ಟಿ ಹಾಗೂ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ರಮೇಶ ಚಲವಾದಿ ಅವರನ್ನು ಗೌರವಿಸಲಾಗುವುದು.

# ಕನ್ನಡಿಗರಲ್ಲಿ ಕೆಚ್ಚು ಮೂಡಿಸಿದ ನಾಡಕವಿಯ ಸಾಹಿತ್ಯ ಸ್ಮರಣೆ

## ಏಕೀಕರಣದ ಕಿಚ್ಚಿಗೆ ಕಾವ್ಯದ ಕಿಡಿ ಹೊತ್ತಿಸಿದ ನಾರಾಯಣರಾವ್



**ವಿಜಯಸಾಕ್ಷಿ ಸುದ್ದಿ, ಗದಗ**

ಕನ್ನಡಿಗರಲ್ಲಿ ನಾಡಪ್ರೇಮ ಹಾಗೂ ಕನ್ನಡಾಭಿಮಾನ ಮೂಡಿಸಿದ ನಾಡಕವಿ ಹುಯಿಲಗೋಳ ನಾರಾಯಣರಾವ್ ತಮ್ಮ ಸಾಹಿತ್ಯ, ಕಾವ್ಯ, ನಾಟಕ ಹಾಗೂ ಗೀತೆಗಳ ಮೂಲಕ ಕನ್ನಡಿಗರಲ್ಲಿ ಕೆಚ್ಚು ತುಂಬಿದರು ಎಂದು ಸಾಹಿತಿ ಚಂದ್ರಶೇಖರ ವಸ್ತ್ರದ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಹಾಗೂ ಹುಯಿಲಗೋಳ ನಾರಾಯಣರಾವ ಸಾಂಸ್ಕೃತಿಕ ಪ್ರತಿಷ್ಠಾನ ಗದಗ ಸಹಯೋಗದಲ್ಲಿ ವಿದ್ಯಾದಾನ ಸಮಿತಿಯ ಶ್ರೀಮತಿ ಎಂ.ಬಿ. ಹುಯಿಲಗೋಳ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ನಾಡಕವಿ ಹುಯಿಲಗೋಳ ನಾರಾಯಣರಾವ್ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕವಿ, ನಾಟಕಕಾರ, ನಟ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ನಾರಾಯಣರಾವ್ ತಮ್ಮ ಕೃತಿಗಳ ಮೂಲಕ ನಾಡಿನ ಜನರಲ್ಲಿ ಕನ್ನಡದ ಅಭಿಮಾನ ಮೂಡಿಸಿದರು. 'ಉದಯವಾಗಲಿ ಚೆಲುವ ಕನ್ನಡ ನಾಡು' ಗೀತೆಯ ಮೂಲಕ ಕರ್ನಾಟಕ ಏಕೀಕರಣದ ಆಶಯಕ್ಕೆ ಹೊಸ ಹುಮ್ಮಸ್ಸು ತುಂಬಿದರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ರಚಿಸಿರುವ ಕೃತಿಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಅಗತ್ಯವಿದೆ ಎಂದರು.

ಹುಯಿಲಗೋಳ ನಾರಾಯಣರಾವ್ ಸಮಗ್ರ ಸಾಹಿತ್ಯ ಸಂಪುಟಗಳನ್ನು ಸರ್ಕಾರ ಪ್ರಕಟಿಸಬೇಕು. ಅವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿ ನಾಡಿನಾದ್ಯಂತ ಅವರ ಸಾಹಿತ್ಯ ಹಾಗೂ ವಿಚಾರಗಳನ್ನು ಪರಿಚಯಿಸುವ ಕಾರ್ಯ ನಡೆಯಬೇಕು ಎಂದು ಚಂದ್ರಶೇಖರ ವಸ್ತ್ರದ ಹೇಳಿದರು.

> ಹುಯಿಲಗೋಳ ನಾರಾಯಣರಾವ್ ಸಾಹಿತ್ಯವನ್ನು ಒಂದು ಕಾಲಘಟ್ಟದ ನೆನಪಾಗಿ ಉಳಿಸದೆ, ಅದರಲ್ಲಿರುವ ನಾಡಪ್ರೇಮ ಮತ್ತು ಕನ್ನಡಾಭಿಮಾನದ ಆಶಯವನ್ನು ಇಂದಿನ ಪೀಳಿಗೆಗೆ ತಲುಪಿಸುವ ಕೆಲಸವಾಗಬೇಕು. ಅವರ ಸಮಗ್ರ ಸಾಹಿತ್ಯದ ಪ್ರಕಟಣೆ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ.
>
> – ಚಂದ್ರಶೇಖರ ವಸ್ತ್ರದ,
> ಸಾಹಿತಿ

ಅಧ್ಯಕ್ಷತೆ ವಹಿಸಿ ವಿದ್ಯಾದಾನ ಸಮಿತಿ ಹಾಗೂ ಹುಯಿಲಗೋಳ ನಾರಾಯಣರಾವ್ ಪ್ರತಿಷ್ಠಾನದ ಅಧ್ಯಕ್ಷ ಶ್ರೀನಿವಾಸ ಬಿ. ಹುಯಿಲಗೋಳ ಮಾತನಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕರ್ನಾಟಕ ಏಕೀಕರಣಕ್ಕೆ ಕಾವ್ಯ, ಗೀತೆ ಹಾಗೂ ನಾಟಕಗಳ ಮೂಲಕ ನಾರಾಯಣರಾವ್ ಅವರು ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ನಾಟಕಗಳು ಅಂದಿನ ಸಾಮಾಜಿಕ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿವೆ. ಅವರು ರಚಿಸಿರುವ ಭಕ್ತಿಗೀತೆಗಳನ್ನು ಕ್ರೋಢೀಕರಿಸಿ ಪ್ರಕಟಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಕುಮಾರವ್ಯಾಸ, ಚಾಮರಸ, ಹುಯಿಲಗೋಳ ನಾರಾಯಣರಾವ್, ಆಲೂರ ವೆಂಕಟರಾವ್ ಹಾಗೂ ದುರ್ಗಸಿಂಹ ಸೇರಿದಂತೆ ಹೆಸರಾಂತ ಸಾಹಿತಿಗಳ ಹೆಸರಿನಲ್ಲಿ ಸರ್ಕಾರ ಟ್ರಸ್ಟ್ ಅಥವಾ ಪ್ರತಿಷ್ಠಾನಗಳನ್ನು ಸ್ಥಾಪಿಸಿ ಅವರ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂದು ಒತ್ತಾಯಿಸಿದರು.

ವೇದಿಕೆಯಲ್ಲಿ ಸಾಹಿತಿ ಕೃಷ್ಣ ಕಟ್ಟಿ, ಪ್ರಾಚಾರ್ಯ ಗಂಗೂಬಾಯಿ ಪವಾರ ಉಪಸ್ಥಿತರಿದ್ದರು. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಡಿ.ಎಸ್. ಬಾಪುರಿ ವಂದಿಸಿದರು.

ಅನ್ನದಾನಿ ಹಿರೇಮಠ, ಪಿ.ಎಚ್. ಕಡಿವಾಲ, ಸಿ.ಕೆ.ಎಚ್. ಕಡಣಿಶಾಸ್ತ್ರಿ, ಪ್ರ. ತೋ. ನಾರಾಯಣಪುರ, ಬಿ.ಎಲ್. ಚವ್ಹಾಣ, ಅಶೋಕ ಹಾದಿ, ಜಯನಗೌಡ ಪಾಟೀಲ, ಸತೀಶ ಚನ್ನಪಗೌಡರ, ವಿ.ಪಿ. ಪಾಟೀಲ, ಎಂ.ಬಿ. ಮಡ್ಡಿ, ಬಿ.ಬಿ. ಮಿರ್ಜಿ, ಜಯದೇವ ಭಟ್, ಎಸ್.ಸಿ. ಹಾಲಕೇರಿ, ಆರ್.ಬಿ. ಮ್ಯಾಗೇರಿ, ಆನಂದ ಹಡಪದ, ರವಿ ದೇವರಡ್ಡಿ, ಸಾಕ್ಷಿ ದೇವರಡ್ಡಿ, ರಾಹುಲ ಗಿಡ್ನಂದಿ, ಎನ್.ಜಿ. ಚನ್ನಪ್ಪಗೌಡ್ರ, ಸುಭಾಸ ಕಠಾರಿ, ಶಶಿ ಹೊಸಳ್ಳಿ, ಸಂಜೀವ ಪೂಜಾರ ಸೇರಿದಂತೆ ಉಪನ್ಯಾಸಕರು ಹಾಗೂ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

# ವಾಣಿಜ್ಯೋದ್ಯಮ ಸಂಸ್ಥೆಗೆ ಡಾ. ಜಯದೇವ ಮೆಣಸಗಿ ಅಧ್ಯಕ್ಷರಾಗಿ ಆಯ್ಕೆ



**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಮೈಲಾರಪ್ಪ ಮೆಣಸಗಿ ಮೆಮೋರಿಯಲ್ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಡಾ. ಜಯದೇವ ಮೆಣಸಗಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ನಗರದ ಆದಿಯೋಗಿ ಎಜುಕೇಷನಲ್ ಟ್ರಸ್ಟ್ ಪದಾಧಿಕಾರಿಗಳು ಡಾ. ಜಯದೇವ ಮೆಣಸಗಿ ಅವರನ್ನು ಭೇಟಿಯಾಗಿ ಅಭಿನಂದಿಸಿ ಸನ್ಮಾನಿಸಿದರು. ಟ್ರಸ್ಟ್ ಅಧ್ಯಕ್ಷ ಶ್ರೀಕಾಂತಗೌಡ ಗ. ಪಾಟೀಲ, ಕಾರ್ಯಾಧ್ಯಕ್ಷ ಪವನಕುಮಾರ ಶೇಠ್ ಹಾಗೂ ಖಜಾಂಚಿ ಕುಮಾರ್ ರಾಥೋಡ್ ಅವರು ಪುಷ್ಪಗುಚ್ಛ ನೀಡಿ, ಮಾಲಾರ್ಪಣೆ ಮಾಡುವ ಮೂಲಕ ಗೌರವಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಎಸ್.ಜಿ. ಪಾಟೀಲ, ಜಿಲ್ಲೆಯ ವಾಣಿಜ್ಯ, ಕೈಗಾರಿಕೆ ಹಾಗೂ ವ್ಯಾಪಾರ ಕ್ಷೇತ್ರಗಳ ಬೆಳವಣಿಗೆಗೆ ನೂತನ ಅಧ್ಯಕ್ಷರ ನಾಯಕತ್ವ ಮತ್ತಷ್ಟು ಬಲ ನೀಡಲಿ. ಉದ್ಯಮಿಗಳು ಹಾಗೂ ವರ್ತಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸಿ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಲಿ ಎಂದು ಆಶಿಸಿದರು.

ಸನ್ಮಾನ ಸ್ವೀಕರಿಸಿದ ಡಾ. ಜಯದೇವ ಮೆಣಸಗಿ, ತಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಿ, ಗದಗ ಜಿಲ್ಲೆಯ ವ್ಯಾಪಾರ–ವಹಿವಾಟು ಹಾಗೂ ಕೈಗಾರಿಕಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ತಿಳಿಸಿದರು.

# ಸ್ವಚ್ಛತೆ ಮೂಲಕ ಸೇವಾ ಮನೋಭಾವ ಬೆಳೆಸಿಕೊಳ್ಳಿ



**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸ್ವಚ್ಛತೆ ಕೇವಲ ವೈಯಕ್ತಿಕ ಜವಾಬ್ದಾರಿಯಲ್ಲ. ಅದು ಸಾಮಾಜಿಕ ಹೊಣೆಗಾರಿಕೆಯೂ ಹೌದು. ವಿದ್ಯಾರ್ಥಿಗಳಲ್ಲಿ ನೈರ್ಮಲ್ಯದ ಅರಿವು, ಪರಿಸರ ಕಾಳಜಿ ಹಾಗೂ ಸೇವಾ ಮನೋಭಾವ ಬೆಳೆಸುವಲ್ಲಿ ಎನ್‌ಎಸ್‌ಎಸ್ ಪ್ರಮುಖ ವೇದಿಕೆಯಾಗಿದೆ ಎಂದು ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸೋಮಶೇಖರ ಕೇರಿಮನಿ ಹೇಳಿದರು.

ಪಟ್ಟಣದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ. ಅಗಡಿ ಇಂಜಿನಿಯರಿಂಗ್ ಕಾಲೇಜಿನ ಮಾಹಿತಿ ತಂತ್ರಜ್ಞಾನ ವಿಭಾಗ ಹಾಗೂ ಎನ್‌ಎಸ್‌ಎಸ್ ಘಟಕದ ವತಿಯಿಂದ ಐತಿಹಾಸಿಕ ಪ್ರಸಿದ್ಧ ಲಕ್ಷ್ಮಲಿಂಗನ ಗುಡಿಯಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎನ್‌ಎಸ್‌ಎಸ್‌ನಲ್ಲಿ 'ಸೇವೆ' ಎಂಬ ಪದಕ್ಕೆ ವಿಶೇಷ ಮಹತ್ವವಿದೆ. ನಮ್ಮ ಶ್ರಮ, ವಿದ್ಯೆ, ಜ್ಞಾನ, ಬುದ್ಧಿ, ಕೌಶಲ್ಯ ಹಾಗೂ ಸಾಮರ್ಥ್ಯಗಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ಸಮಾಜ ಮತ್ತು ದೇಶದ ಒಳಿತಿಗಾಗಿ ಬಳಸುವುದೇ ನಿಜವಾದ ಸೇವೆ ಎಂದು ತಿಳಿಸಿದರು.

ಇಂತಹ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಶಿಸ್ತು, ಸಹಕಾರ, ಸಹಬಾಳ್ವೆ ಹಾಗೂ ಶ್ರಮ ಸಂಸ್ಕೃತಿಯ ಮಹತ್ವವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಸ್ವಚ್ಛ ಪರಿಸರ ನಿರ್ಮಾಣದಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕು. ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಯನ್ನು ವಿದ್ಯಾರ್ಥಿಗಳು ಜೀವನದ ಭಾಗವಾಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಸಂಗಮೇಶ ಉಳವಪ್ಪನವರ, ಹರೀಶ ಎಚ್.ಎಂ., ಸಿಬ್ಬಂದಿ ಇಸ್ಮಾಯಿಲ್ ದೊಡ್ಡಮನಿ, ಸ್ಥಳೀಯರಾದ ಶ್ರೀಕಾಂತ ಪೂಜಾರ, ನಾಗೇಶ ಮಲಗಣ್ಣವರ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಬರಗಾಲದಲ್ಲೂ ಭರ್ಜರಿ ಇಳುವರಿ: ಬ್ಯಾಲಾಳಿನಲ್ಲಿ ಪಯೋನಿಯರ್ ಕ್ಷೇತ್ರೋತ್ಸವ



**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ ತಾಲೂಕಿನ ಬ್ಯಾಲಾಳು ಗ್ರಾಮದ ರೈತ ಬಾರಿಕರ ಕೆಂಚಪ್ಪ ಅವರ ಹೊಲದಲ್ಲಿ ಪಯೋನಿಯರ್ ಕಂಪನಿಯಿಂದ ಮೆಕ್ಕೆಜೋಳದ ಕ್ಷೇತ್ರೋತ್ಸವ ನಡೆಯಿತು.

ಕಾರ್ಯಕ್ರಮದಲ್ಲಿ ಪಯೋನಿಯರ್ ಕಂಪನಿಯ ಪ್ರಾದೇಶಿಕ ವ್ಯವಸ್ಥಾಪಕ ರಮೇಶ್ ಮಾತನಾಡಿ, ಕಂಪನಿಯ ಮೆಕ್ಕೆಜೋಳ ತಳಿಗಳು ಎಕರೆಗೆ 35ರಿಂದ 40 ಕ್ವಿಂಟಲ್‌ವರೆಗೆ ಇಳುವರಿ ನೀಡುವ ಸಾಮರ್ಥ್ಯ ಹೊಂದಿವೆ. ರೈತರು ಗುಣಮಟ್ಟದ ಬೀಜ ಬಳಸಿ ಹೆಚ್ಚಿನ ಇಳುವರಿ ಹಾಗೂ ಆದಾಯ ಪಡೆಯಬೇಕು ಎಂದು ಸಲಹೆ ನೀಡಿದರು.

ಹೊಲದ ಮಾಲೀಕ ಬಾರಿಕರ ಕೆಂಚಪ್ಪ ಮಾತನಾಡಿ, ಪಯೋನಿಯರ್ ತಳಿಯ ಮೆಕ್ಕೆಜೋಳದ ಕಾಳುಗಳು ದಪ್ಪವಾಗಿದ್ದು, ತೆನೆಯ ತುದಿವರೆಗೂ ಸಮವಾಗಿ ತುಂಬಿರುವುದರಿಂದ ಉತ್ತಮ ಇಳುವರಿ ದೊರೆತಿದೆ ಎಂದರು.

ರೈತ ಬಾರಿಕರ ಪರಶುರಾಮ ಕೂಡ ಪಯೋನಿಯರ್ ತಳಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಮುಂದೆಯೂ ಇದೇ ಕಂಪನಿಯ ಬೀಜ ಬಳಸುವುದಾಗಿ ತಿಳಿಸಿದರು.

ಪಯೋನಿಯರ್ ಕ್ಷೇತ್ರಾಧಿಕಾರಿ ಸಿದ್ದೇಶ್ ಸೇರಿದಂತೆ ಕಂಪನಿ ಪ್ರತಿನಿಧಿಗಳು ಹಾಗೂ ಹಲವು ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಶರಣಬಸವೇಶ್ವರ-ಮಾದಮ್ಮ ಕಲ್ಯಾಣೋತ್ಸವಕ್ಕೆ ಇಡೀ ಊರೇ ಬಂಧು-ಬಳಗ

# ಪುರಾಣದ ಮದುವೆ ಪ್ರಸಂಗಕ್ಕೆ ಜಕ್ಕಲಿಯಲ್ಲಿ ಜೀವಂತ ರೂಪ

> ಹಿರಿಯರು ನಡೆಸಿಕೊಂಡು ಬಂದಿರುವ ಇಂತಹ ಆಚರಣೆಗಳು ನಮ್ಮ ಅಮೂಲ್ಯ ಸಂಪ್ರದಾಯಗಳು. ಮಹಾತ್ಮರ ಬದುಕು ಮತ್ತು ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮಠದಲ್ಲಿ ಇಂತಹ ಪುರಾಣ ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.
>
> – ವೇ.ಮೂ. ಎಂ.ಜಿ. ಗುರುಸಿದ್ದೇಶ್ವರ ಶಾಸ್ತ್ರಿಗಳು




**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಪುರಾಣ ಪ್ರವಚನದಲ್ಲಿ ಕೇಳಿಬಂದ ವಿವಾಹ ಪ್ರಸಂಗವೊಂದಕ್ಕೆ ಜೀವಂತ ರೂಪ ನೀಡಿದ ಅಪರೂಪದ ಕಲ್ಯಾಣೋತ್ಸವ ಸಮೀಪದ ಜಕ್ಕಲಿಯಲ್ಲಿ ಭಕ್ತಿ, ಸಂಭ್ರಮ ಹಾಗೂ ಗ್ರಾಮೀಣ ಪರಂಪರೆಯ ಸೊಗಡಿನೊಂದಿಗೆ ನಡೆಯಿತು.

ಹಾಲಕೆರೆ ಶಾಖಾ ಶ್ರೀ ಅನ್ನದಾನೇಶ್ವರ ಮಠದ ಜಾತ್ರಾ ಮಹೋತ್ಸವ ಹಾಗೂ ದಸರಾ ಅಂಗವಾಗಿ ತಿಂಗಳ ಪರ್ಯಂತ ನಡೆಯುತ್ತಿರುವ ದ್ಯಾಂಪೂರ ಶ್ರೀ ಕಲ್ಲಿನಾಥ ಕವಿ ವಿರಚಿತ 'ಮಹಾದಾಸೋಹಿ ಕಲಬುರ್ಗಿ ಶರಣಬಸವೇಶ್ವರ ಪುರಾಣ' ಪ್ರವಚನದಲ್ಲಿ ವಿವಾಹ ಪ್ರಸಂಗ ಬಂದ ಹಿನ್ನೆಲೆಯಲ್ಲಿ ಶರಣಬಸವೇಶ್ವರ–ಮಾದಮ್ಮ ಮಾತೆಯ ಕಲ್ಯಾಣೋತ್ಸವ ಆಯೋಜಿಸಲಾಗಿತ್ತು.

ಮಧ್ಯಾಹ್ನ ಶ್ರೀ ಕಲ್ಮೇಶ್ವರ ದೇವಸ್ಥಾನದಿಂದ ಗ್ರಾಮದ ಒಂದು ಭಾಗದ ಸದ್ಭಕ್ತರು ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ತೆರಳಿ 'ಕನ್ಯೆ ಪರೀಕ್ಷೆ'ಯಲ್ಲಿ ಪಾಲ್ಗೊಂಡರು. ಗಂಡಿನ ಕಡೆಯವರು ಮದುವೆ ಮನೆಯ ನೆಂಟರಂತೆ ಆಗಮಿಸಿದರೆ, ಹೆಣ್ಣಿನ ಕಡೆಯವರು ಆತ್ಮೀಯವಾಗಿ ಬರಮಾಡಿಕೊಂಡರು. ಹಿರಿಯರು ವಧುವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುವ ಮೂಲಕ ಹಳೆಯ ಕಾಲದ ಗ್ರಾಮೀಣ ವಿವಾಹ ಸಂಪ್ರದಾಯವನ್ನು ಮರುಸೃಷ್ಟಿಸಲಾಯಿತು.

ನಂತರ ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಆಗಮಿಸಿದ ಭಕ್ತರು ಶ್ರೀ ಕಲ್ಮೇಶ್ವರ ದೇವಸ್ಥಾನದಲ್ಲಿ ನಿಶ್ಚಿತಾರ್ಥ ನೆರವೇರಿಸಿದರು.

ಗಂಡಿನ ಕಡೆಯವರಾಗಿ ರೇಖಾ–ಲಿಂಗರಾಜ ಮೇಟಿ ದಂಪತಿ ಹಾಗೂ ಹೆಣ್ಣಿನ ಕಡೆಯವರಾಗಿ ವಿಜಯಲಕ್ಷ್ಮೀ–ಸುಭಾಷ ಕಡಗದ ದಂಪತಿ ಪ್ರಮುಖ ವಿಧಿವಿಧಾನಗಳಲ್ಲಿ ಭಾಗವಹಿಸಿದರು.

ಜಾತಿ, ಧರ್ಮ, ಮತ, ಪಂಥದ ಭೇದವಿಲ್ಲದೆ ಗ್ರಾಮದ ಸಮಸ್ತ ಸದ್ಭಕ್ತರು ಮದುವೆ ಮನೆಯ ಬಂಧು–ಬಳಗದಂತೆ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಗ್ರಾಮದ ಒಂದು ಭಾಗದವರು ಗಂಡಿನ ಕಡೆಯವರಾಗಿ, ಮತ್ತೊಂದು ಭಾಗದವರು ಹೆಣ್ಣಿನ ಕಡೆಯವರಾಗಿ ಭಾಗವಹಿಸಿದ್ದರಿಂದ ಇಡೀ ಜಕ್ಕಲಿ ಗ್ರಾಮವೇ ಮದುವೆ ಮನೆಯಾಗಿ ಕಂಗೊಳಿಸಿತು.

ನಿಶ್ಚಿತಾರ್ಥದ ಬಳಿಕ ಶರಣಬಸವೇಶ್ವರ–ಮಾದಮ್ಮ ಮಾತೆಯ ಮೂರ್ತಿಗಳ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಡೊಳ್ಳಿನ ಭರ್ಜರಿ ನಾದ, ಮಂಗಳವಾದ್ಯ ಹಾಗೂ ಭಕ್ತರ ಹರ್ಷೋದ್ಗಾರದಿಂದ ಗ್ರಾಮದಲ್ಲಿ ಮದುವೆಯ ಸಂಭ್ರಮ ಮನೆ ಮಾಡಿತ್ತು.

ರಾತ್ರಿ ಅನ್ನದಾನೇಶ್ವರ ಶ್ರೀಮಠದ ಕಲ್ಯಾಣ ಮಂಟಪದಲ್ಲಿ ಅಲಂಕರಿಸಿದ್ದ ವೇದಿಕೆಯಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ವಿವಾಹ ನೆರವೇರಿಸಲಾಯಿತು.

ಶರಣಯ್ಯ ಹಿರೇಮಠ ಅವರ ನೇತೃತ್ವದಲ್ಲಿ ವೇ.ಮೂ. ಗುರುಸಿದ್ದೇಶ್ವರ ಶಾಸ್ತ್ರಿಗಳು ಹಾಗೂ ವೇ.ಮೂ. ಗುರುಲಿಂಗಮೂರ್ತಿ ಮಂಟಯ್ಯನಮಠ ಅವರ ಪೌರೋಹಿತ್ಯದಲ್ಲಿ ವಿಳ್ಯೆಕಾರ್ಯ, ಬಾಸಿಂಗ ಕಟ್ಟುವಿಕೆ, ಉಂಗುರ ತೊಡಿಸುವಿಕೆ ಹಾಗೂ ಮಾಂಗಲ್ಯಧಾರಣೆ ಸೇರಿದಂತೆ ವಿವಿಧ ವಿವಾಹ ಶಾಸ್ತ್ರಗಳು ನೆರವೇರಿದವು.

ಮಾಂಗಲ್ಯಧಾರಣೆ ವೇಳೆ ಭಕ್ತರು ಅಕ್ಷತೆ ಹಾಕಿ ಶುಭ ಹಾರೈಸಿದರು. ಬಳಿಕ ಭಕ್ತರಿಗೆ ಅನ್ನಸಂತರ್ಪಣೆ ಹಾಗೂ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

ಕಲ್ಯಾಣೋತ್ಸವಕ್ಕೆ ಆಗಮಿಸಿದ್ದ ಭಕ್ತರು ಸಾಂಪ್ರದಾಯಿಕ ಉಡುಗೆಯಲ್ಲಿ ಕಂಗೊಳಿಸಿದರು. ಪುರುಷರು ವಿಭೂತಿ, ರಟ್ಟಿನ ಟೊಪ್ಪಿಗೆ ಹಾಗೂ ರುಮಾಲು ಧರಿಸಿದ್ದರೆ, ಮಹಿಳೆಯರು ಜರತಾರಿ ರೇಷ್ಮೆ ಸೀರೆ, ಹೂವು ಮತ್ತು ಸಾಂಪ್ರದಾಯಿಕ ಆಭರಣಗಳಿಂದ ಗಮನ ಸೆಳೆದರು.

## ಉತ್ತರ ಕರ್ನಾಟಕದ ಕಲಾವಿದರಿಗೆ ಆದ್ಯತೆ ನೀಡಿದ ಪಿ. ಶೇಷಾದ್ರಿ

# 'ಪಂಚಾಯಿತಿ'ಯಲ್ಲಿ ಯೂಟ್ಯೂಬರ್‌ಗಳಿಗೂ ಅವಕಾಶ



**ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಯೂಟ್ಯೂಬ್‌ನಲ್ಲಿ ತಮ್ಮದೇ ಆದ ಪ್ರೇಕ್ಷಕ ಬಳಗ ಹೊಂದಿರುವ ಪ್ರತಿಭಾವಂತ ಕಲಾವಿದರಿಗೆ ಸಿನಿಮಾದಲ್ಲಿ ಅವಕಾಶ ನೀಡುವ ಮೂಲಕ ಹಿರಿಯ ನಿರ್ದೇಶಕ, ರಾಷ್ಟ್ರ ಪ್ರಶಸ್ತಿ ವಿಜೇತ ಪಿ. ಶೇಷಾದ್ರಿ ಅವರು ತಮ್ಮ ಹೊಸ ಸಿನಿಮಾ 'ಪಂಚಾಯಿತಿ'ಯಲ್ಲಿ ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ.

ನೇಟಿವ್ ಕ್ರಿಯೇಷನ್ಸ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಚಿತ್ರದಲ್ಲಿ ಯೂಟ್ಯೂಬ್‌ನಲ್ಲಿ ಜನಪ್ರಿಯರಾಗಿರುವ ಗೋಕುಲ್ ರಾಜ್, ಜಗದೀಶ್ ಮೂಕಿ, ಪ್ರಕಾಶ್ ರಾಜಕುಮಾರ್, ಶ್ರುತಿ ಹೇಮಂತ್, ಬಿಂದು ಹಾಗೂ ವೀರಣ್ಣ ಹೊಸಮನಿ ಸೇರಿದಂತೆ ಹಲವು ಕಲಾವಿದರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಚಿತ್ರದ ಮತ್ತೊಂದು ವಿಶೇಷವೆಂದರೆ, ಬಹುತೇಕ ಪಾತ್ರಗಳಿಗೆ ಉತ್ತರ ಕರ್ನಾಟಕದ ಕಲಾವಿದರನ್ನೇ ಆಯ್ಕೆ ಮಾಡಲಾಗಿದೆ. ಉತ್ತರ ಕರ್ನಾಟಕದ ಭಾಷೆ ಹಾಗೂ ಇಲ್ಲಿನ ಸೊಗಡು ತಮ್ಮನ್ನು ಸದಾ ಆಕರ್ಷಿಸುತ್ತದೆ ಎಂದು ನಿರ್ದೇಶಕ ಪಿ. ಶೇಷಾದ್ರಿ ತಿಳಿಸಿದ್ದಾರೆ.

ನಿಜ ಜೀವನದ ಜೋಗತಿ 'ದೀಪಾ ಜೋಗತಿ' ಅವರು ಪ್ರಮುಖ ಪಾತ್ರವೊಂದರಲ್ಲಿ ಅಭಿನಯಿಸಿರುವುದು ಚಿತ್ರದ ಮತ್ತೊಂದು ವಿಶೇಷ. ರಾಯಚೂರಿನವರಾದ ಅವರು ಜೋಗತಿ ಸಮುದಾಯದ ಪ್ರತಿನಿಧಿಯಾಗಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದು, ಚಿತ್ರಕ್ಕಾಗಿ ಜನಪದ ಸೊಗಡಿನ ಹಾಡೊಂದನ್ನೂ ಹಾಡಿದ್ದಾರೆ.

ಹುಬ್ಬಳ್ಳಿ, ಧಾರವಾಡ, ಶಿವಳ್ಳಿ, ಕುಂದಗೋಳ, ಹೆಬ್ಬಳ್ಳಿ ಹಾಗೂ ಬೂದನಗುಡ್ಡ ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ತಾಣಗಳಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಸಂಕಲನ ಕಾರ್ಯ ಮುಗಿದಿದ್ದು, ಸಂಗೀತ ಜೋಡಣೆ, ಶಬ್ದ ವಿನ್ಯಾಸ ಸೇರಿದಂತೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ.

ಶ್ರುತಿ ಬಿಸರಹಳ್ಳಿ, ಬಸವರಾಜ ತಿರ್ಲಾಪುರ ಸೇರಿದಂತೆ ಹಲವು ಕಲಾವಿದರು ಅಭಿನಯಿಸಿದ್ದಾರೆ. ಪಿ. ಶೇಷಾದ್ರಿ ಕಥೆ, ಚಿತ್ರಕತೆ ಬರೆದು ನಿರ್ದೇಶಿಸಿದ್ದು, ಅರವಿಂದ ಮಿತ್ರ ಕಥೆ, ಗುರುಪ್ರಸಾದ್ ಕಾಶಿ ಛಾಯಾಗ್ರಹಣ, ಶಿವಾ ಸಂಗೀತ, ಬಿ.ಎಸ್. ಕೆಂಪರಾಜ್ ಸಂಕಲನ, ಟಿ.ಆರ್. ಪ್ರಭು ಹಾಗೂ ವಿದ್ಯಾಶ್ರೀ ಸಹ ನಿರ್ದೇಶನ, ಪ್ರಕಾಶ್ ರಾಜಕುಮಾರ್ ಕಾರ್ಯನಿರ್ವಹಿಸಿದ್ದಾರೆ.

ದೊಡ್ಡ ನಾಗಯ್ಯ ನಿರ್ಮಾಪಕರಾಗಿದ್ದು, ರವಿಶಂಕರ್ ನಿರ್ಮಾಣ ನಿರ್ವಹಣೆ ವಹಿಸಿ ಕೊಂಡಿದ್ದಾರೆ.

ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

## ದಸರಾ ಮಹೋತ್ಸವಕ್ಕೆ ಗಣ್ಯರಿಗೆ ಆಹ್ವಾನ

**ವಿಜಯಸಾಕ್ಷಿ ಸುದ್ದಿ, ಗದಗ**



ಗದಗ ನಗರದ ಅಡವೀಂದ್ರಸ್ವಾಮಿ ಮಠದಲ್ಲಿ ಅ.11ರಂದು ನಡೆಯಲಿರುವ 2026ನೇ ಸಾಲಿನ ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಅಧಿಕೃತ ಉದ್ಘಾಟಕರಾದ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹ ಪ್ರಾಧ್ಯಾಪಕಿ ಹಾಗೂ ಸಮುದಾಯ ವೈದ್ಯಕೀಯ ವಿಭಾಗದ ಡಾ. ರುದ್ರಮ್ಮ ಜೆ. ಮತ್ತು ಮುಖ್ಯ ಅತಿಥಿಗಳಾದ ಸಂಸ್ಥೆಯ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಅವರಿಗೆ ಶ್ರೀಮಠದ ವತಿಯಿಂದ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಲಾಯಿತು.

ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಸಂತೋಷ ಮಹೇಶಚಂದ್ರ ಕಬಾಡರ, ಕಾರ್ಯದರ್ಶಿ ಶಿವಪ್ರಭು ನೀಲಗುಂದ, ಕೋಶಾಧ್ಯಕ್ಷ ಪ್ರಭುಗೌಡ ಪಾಟೀಲ, ಮಹಿಳಾ ಅಧ್ಯಕ್ಷೆ ಶಿವಲೀಲಾ ಅಕ್ಕಿ, ಕಾರ್ಯದರ್ಶಿ ಅಶ್ವಿನಿ ನೀಲಗುಂದ ಹಾಗೂ ಪ್ರಕಾಶ ಅಕ್ಕಿ ಉಪಸ್ಥಿತರಿದ್ದರು.

## ವಿಜಯೇಂದ್ರಗೆ ಭವ್ಯ ಸ್ವಾಗತ



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ವಿಜಯ ಸಂಕಲ್ಪ ಯಾತ್ರೆಯ ನಿಮಿತ್ತ ಬುಧವಾರ ಗದಗದಿಂದ ಗಜೇಂದ್ರಗಡಕ್ಕೆ ತೆರಳುತ್ತಿದ್ದ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ನರೇಗಲ್ಲ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಭವ್ಯ ಸ್ವಾಗತ ನೀಡಿದರು. ಪೊಲೀಸ್ ಠಾಣೆ ಬಳಿ ಜಮಾಯಿಸಿದ್ದ ಕಾರ್ಯಕರ್ತರು ಜಯಘೋಷ ಮೊಳಗಿಸಿ, ಹೂಮಾಲೆ ಹಾಕಿ ವಿಜಯೇಂದ್ರ ಅವರನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಅನಿಲ್ ಮೆಣಸಿನಕಾಯಿ, ರವಿ ದಂಡಿನ, ಉಮೇಶ ಚನ್ನು ಪಾಟೀಲ, ವೆಂಕಟೇಶ ಕುಲಕರ್ಣಿ, ಮುತ್ತಣ್ಣ ಲಿಂಗನಗೌಡ್ರ, ಬಸವರಾಜ ವಂಕಲಕುಂಟಿ, ಶರಣಪ್ಪ ಕಲಾಲಬಂಡಿ, ರುದ್ರೇಶ ಕೊಟಗಿ, ಹಾಲಪ್ಪ ಹಲಗೇರಿ, ಮಲ್ಲಪ್ಪ ಹಕಾರಿ, ಶರಣಪ್ಪ ಕಾಟಿ, ಸಿದ್ದಪ್ಪ ರಾಗಿ, ಶಿವಕುಮಾರ ದೊಡ್ಡೂರ, ಕಳಕಪ್ಪ ಸರ್ವಿ, ಚನ್ನಮಲ್ಲಪ್ಪ ಹೊಂಬಳ, ಚಂದ್ರು ಕುರಿ, ಅರುಣಕುಮಾರ ಮಠದ, ರಾಘು ಕರಡಿಮಠ, ರವಿ ಕೋಣನ್ನವರ, ಆನಂದ ಕಡೆತೋಟದ, ಮಲ್ಲು ಅಂಗಡಿ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

## ಸಿ.ಸಿ. ಪಾಟೀಲ, ಅನಿಲ್ ಮೆಣಸಿನಕಾಯಿಗೆ ಸನ್ಮಾನ



**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಅನಿಲ್ ಪಿ. ಮೆಣಸಿನಕಾಯಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಸಿ. ಪಾಟೀಲ ಹಾಗೂ ಅನಿಲ್ ಪಿ. ಮೆಣಸಿನಕಾಯಿ ಅವರನ್ನು ಕಂಬಳಿ ಹೊದಿಸಿ ಸನ್ಮಾನಿಸಲಾಯಿತು.

ಬಿಜೆಪಿ ಗದಗ ಜಿಲ್ಲಾ ಪ್ರಕೋಷ್ಠಗಳ ಸಹ ಸಂಯೋಜಕ ರಮೇಶ ಎನ್. ಸಜ್ಜಗಾರ ಅವರ ನೇತೃತ್ವದಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಕುರುಬ ಸಮಾಜದ ಮುಖಂಡರು ಹಾಗೂ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು. ಶಿವು ಡಂಬಳ, ಅರುಣಕುಮಾರ ಕಂಕರಿ, ಬಾಲು ಜಗ್ಗಲ್, ರವಿ ದಂಡಿನ, ಸಿದ್ದಣ್ಣ ಪಲ್ಲೇದ, ಎಂ.ಎಸ್. ಕರಿಗೌಡ್ರು, ರಾಜಣ್ಣ ಕುರುಡಗಿ, ಭೀಮಸಿಂಗ ರಾಠೋಡ, ಸುರೇಶ ಮರಳಪ್ಪನವರ್, ಅರವಿಂದ ಹುಲ್ಲೂರ, ಚಂದ್ರಶೇಖರ ಜೋರಗಸ್ತಿ, ಗುಡದಪ್ಪ ಹಂಚಿನಾಳ, ಆನಂದ ಬೋಸಗಿ, ಮಂಜುನಾಥ ಶಾಂತಗೇರಿ, ರವಿ ಮಾನ್ವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಇಂದು ಶ್ರೀ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ

**ವಿಜಯಸಾಕ್ಷಿ ಸುದ್ದಿ, ಗದಗ**



ನಗರದ ಜವುಳಗಲ್ಲಿಯ ಶ್ರೀ ಸಮಗಾರ ಹರಳಯ್ಯ ಸಮಾಜದ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಿರುವ ಆದಿಶಕ್ತಿ ಶ್ರೀ ದುರ್ಗಾದೇವಿಯ ಮೂರ್ತಿ ಪ್ರತಿಷ್ಠಾಪನೆ ಅ.9ರಂದು ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ನೆರವೇರಲಿದೆ.

ಅ.19ರಂದು ಸೋಮವಾರ ಮಧ್ಯಾಹ್ನ 1 ಗಂಟೆಗೆ ಖಂಡೆ ಪೂಜೆ ನಿಮಿತ್ತ ಮಹಾ ಅನ್ನಸಂತರ್ಪಣೆ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಹಾಪ್ರಸಾದ ಸ್ವೀಕರಿಸಿ, ಕಾರ್ಯಕ್ರಮಕ್ಕೆ ಸಹಕಾರ ನೀಡುವಂತೆ ದೇವಸ್ಥಾನ ಸಮಿತಿ ಮನವಿ ಮಾಡಿದೆ.

ಅ.20ರಂದು ಮಂಗಳವಾರ ದಸರಾ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ಮಧ್ಯಾಹ್ನ 4 ಗಂಟೆಗೆ ಜವುಳಗಲ್ಲಿಯ ಶ್ರೀ ಯಲ್ಲಮ್ಮದೇವಿ ದೇವಸ್ಥಾನದಿಂದ ಪಲ್ಲಕ್ಕಿ ಮೆರವಣಿಗೆ ಆರಂಭವಾಗಲಿದೆ. ಸಂಜೆ ವಿಜಯದಶಮಿ ಬನ್ನಿ ಮುಡಿಯುವ ಕಾರ್ಯಕ್ರಮ ಜರುಗಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಲ್ಲಕ್ಕಿ ಮೆರವಣಿಗೆ ಹಾಗೂ ಬನ್ನಿ ಮುಡಿಯುವ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಶ್ರೀ ಸಮಗಾರ ಹರಳಯ್ಯ ಯುವಕ ಸಂಘದ ಅಧ್ಯಕ್ಷರು ಮನವಿ ಮಾಡಿದ್ದಾರೆ.

## ಥ್ರೋಬಾಲ್‌ನಲ್ಲಿ ಚಿಂಚಲಿ ಶಾಲೆಗೆ ಪ್ರಥಮ ಸ್ಥಾನ



**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಮಟ್ಟದ ಬಾಲಕಿಯರ U–14 ಥ್ರೋಬಾಲ್ ಪಂದ್ಯಾವಳಿಯಲ್ಲಿ ಚಿಂಚಲಿಯ ಪಿ.ಎಂ. ಶ್ರೀ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ.

ತಂಡದ ಆಟಗಾರ್ತಿಯರು ಉತ್ತಮ ಕ್ರೀಡಾ ಕೌಶಲ್ಯ, ಸಂಘಟಿತ ಆಟ ಹಾಗೂ ಆತ್ಮವಿಶ್ವಾಸದೊಂದಿಗೆ ಸ್ಪರ್ಧಿಸಿ ಎದುರಾಳಿ ತಂಡಗಳನ್ನು ಮಣಿಸಿ ವಿಜಯ ಸಾಧಿಸಿದರು. ಈ ಗೆಲುವಿನೊಂದಿಗೆ ತಂಡ ಸತತ ಎರಡನೇ ಬಾರಿಗೆ ಬೆಳಗಾವಿ ವಿಭಾಗ ಮಟ್ಟದ ಥ್ರೋಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿದೆ.

ವಿದ್ಯಾರ್ಥಿನಿಯರ ಸಾಧನೆಗೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹಾಲಶಂಕ್ರಪ್ಪ ಅರವಟಗಿ, ಉಪಾಧ್ಯಕ್ಷೆ ಪರ್ವಿನ ಬಾನು ನದಾಫ್, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ವಿಭಾಗ ಮಟ್ಟದ ಪಂದ್ಯಾವಳಿಯಲ್ಲೂ ತಂಡ ಉತ್ತಮ ಪ್ರದರ್ಶನ ನೀಡಿ ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಿದ್ದಾರೆ.

## ರೈಲಿಗೆ ಸಿಲುಕಿ ಮೃತಪಟ್ಟ ಅಪರಿಚಿತ ಮಹಿಳೆ

**ವಿಜಯಸಾಕ್ಷಿ ಸುದ್ದಿ, ಗದಗ**

ಕೊಪ್ಪಳ ರೈಲ್ವೆ ನಿಲ್ದಾಣದ ಸಮೀಪ ರೈಲಿಗೆ ಸಿಲುಕಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಅಪರಿಚಿತ ಮಹಿಳೆಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಅವರ ವಾರಸುದಾರರ ಪತ್ತೆಗಾಗಿ ಗದಗ ರೈಲ್ವೆ ಪೊಲೀಸರು ಸಾರ್ವಜನಿಕರ ಸಹಕಾರ ಕೋರಿದ್ದಾರೆ. ಗದಗ ರೈಲ್ವೆ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಸಂಪರ್ಕಿಸಲು ಗದಗ ರೈಲ್ವೆ ಪೊಲೀಸ್ ಠಾಣೆ: 08372–278744 ಮೊಬೈಲ್: 9480802128 ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080–22871291

## ವಾಸಣ್ಣ ಕುರಡಗಿಗೆ ಮಹಿಳಾ ಮಂಡಳದ ಗೌರವ



**ವಿಜಯಸಾಕ್ಷಿ ಸುದ್ದಿ, ಗದಗ**

ಕಾಂಗ್ರೆಸ್ ಘಟಕದ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ವಾಸಣ್ಣ ಕುರಡಗಿ ಅವರನ್ನು ನಗರದ ಶ್ರೀ ಕರಿಯಮ್ಮದೇವಿ ಮಹಿಳಾ ಮಂಡಳದ ವತಿಯಿಂದ ಸನ್ಮಾನಿಸಲಾಯಿತು.

ಮಹಿಳಾ ಮಂಡಳದ ಅಧ್ಯಕ್ಷೆ ರೇಣುಕಾ ಕೇಸರಿ ನೇತೃತ್ವದಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಅನಿತಾ ಜಕಬಾಳ, ಶಶಿಕಲಾ ಗುರಿಕಾರ, ಪಾರ್ವತಿ ಮುದ್ಲಾಪುರ, ಅಕ್ಕಮಹಾದೇವಿ ಕಳ್ಳಿ, ಶಾಂತಾ ಹೊನಕೇರಿ, ಜಯಲಕ್ಷ್ಮಿ ಡೊಳ್ಳಿನವರ, ಗಂಗಾ ಚಕ್ರನ್ನವರ, ಮಂಜುಳಾ ಹೊಸಳ್ಳಿ, ಶಾಂತಾ ಗೌಡರ, ಗಂಗವ್ವ ನರ್ತಿ, ಡಾ. ಸಿದ್ದಣ್ಣ ಜಕಬಾಳ, ರಾಮಪ್ಪ ಕಾಶಪ್ಪನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಹೋಟೆಲ್‌ಗಳಲ್ಲಿ ಅಡುಗೆ ಎಣ್ಣೆ ಮರುಬಳಕೆ ದಂಧೆಗೆ ಬ್ರೇಕ್

**ವಿಜಯಸಾಕ್ಷಿ ಸುದ್ದಿ, ತುಮಕೂರು**

ಹೋಟೆಲ್‌ಗಳಲ್ಲಿ ಅಡುಗೆ ಎಣ್ಣೆಯನ್ನು ಪದೇಪದೇ ಮರುಬಳಕೆ ಮಾಡುವ ದಂಧೆಗೆ ಕಡಿವಾಣ ಹಾಕಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.

ತುಮಕೂರಿನಲ್ಲಿ ಆರೋಗ್ಯ ಇಲಾಖೆ ಸಭೆ ಬಳಿಕ ಮಾತನಾಡಿದ ಅವರು, ಬಳಸಿದ ಅಡುಗೆ ಎಣ್ಣೆಯನ್ನು ಮರುಬಳಕೆ ಮಾಡುವ ಪ್ರಕರಣಗಳು ಗಮನಕ್ಕೆ ಬಂದಿದ್ದು, ಇದನ್ನು ನಿಯಂತ್ರಿಸುವ ಕ್ರಮ ಕೈಗೊಳ್ಳಲಾಗುವುದು ಎಂದರು.

ಎಣ್ಣೆ ಖರೀದಿಯ ವಿವರಗಳನ್ನು ನೋಂದಣಿ ಮಾಡುವ ವ್ಯವಸ್ಥೆ ಜಾರಿಗೆ ತರಲು ಚಿಂತನೆ ನಡೆದಿದೆ. ವಿಶೇಷ ಮೂಲಕ ಎಲ್ಲಿ, ಎಷ್ಟು ಪ್ರಮಾಣದ ಎಣ್ಣೆ ಖರೀದಿಸಲಾಗಿದೆ ಮತ್ತು ಬಳಕೆಯ ಬಳಿಕ ಎಷ್ಟು ಉಳಿದಿದೆ ಎಂಬ ಮಾಹಿತಿಯನ್ನು ದಾಖಲಿಸುವ ವ್ಯವಸ್ಥೆ ರೂಪಿಸುವ ಕುರಿತು ಚರ್ಚೆ ನಡೆದಿದೆ ಎಂದು ಹೇಳಿದರು.

## ವಿದ್ಯಾರ್ಥಿನಿಯರಿಗೆ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ

**ವಿಜಯಸಾಕ್ಷಿ ಸುದ್ದಿ, ಗದಗ**




ವಿದ್ಯಾರ್ಥಿನಿಯರು ವಿವಿಧ ಕೌಶಲ್ಯಗಳನ್ನು ರೂಢಿಸಿಕೊಂಡು ಸ್ವಂತ ಉದ್ಯೋಗದ ಮೂಲಕ ಆದಾಯ ಗಳಿಸಿ ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶದಿಂದ ಕೆಎಲ್‌ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಗೃಹವಿಜ್ಞಾನ ವಿಭಾಗ, ಮಹಿಳಾ ಸಬಲೀಕರಣ ಕೋಶ ಹಾಗೂ ಭಾರ್ಗವಿ ಫೌಂಡೇಶನ್ ಸಹಯೋಗದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಭಾರ್ಗವಿ ಫೌಂಡೇಶನ್‌ನ ಕವಿತಾ ಕೊಣ್ಣೂರ ಅವರ ಮಾರ್ಗದರ್ಶನದಲ್ಲಿ ನಿತಾ ಜನಜಿ ಹಾಗೂ ವಿಜಯಲಕ್ಷ್ಮಿ ಕಪಾಲಿ ಕಾರ್ಯಾಗಾರ ನಡೆಸಿಕೊಟ್ಟರು. ಆಭರಣ ತಯಾರಿಕೆ, ಸೀರೆಯ ಕುಚ್ಚು, ಆರಿ ವರ್ಕ್ ಸೇರಿದಂತೆ ವಿವಿಧ ಕೌಶಲ್ಯಗಳ ಕುರಿತು ಪ್ರಾತ್ಯಕ್ಷಿಕೆ ಹಾಗೂ ಮಾರ್ಗದರ್ಶನ ನೀಡಿದರು.

ವಿದ್ಯಾರ್ಥಿನಿ ಅಫ್ರೀನ್ ಇಟಿ ಅವರು ವಿವಿಧ ಮೆಹಂದಿ ವಿನ್ಯಾಸಗಳನ್ನು ಪ್ರಾತ್ಯಕ್ಷಿಕೆ ಮೂಲಕ ಪರಿಚಯಿಸಿದರು. ಮೆಹಂದಿ ಸೇರಿದಂತೆ ಸೃಜನಶೀಲ ಕೌಶಲ್ಯಗಳನ್ನು ಕರಗತ ಮಾಡಿಕೊಂಡು ಸ್ವಯಂ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬಹುದು ಎಂದು ತಿಳಿಸಿದರು.

ಗೃಹವಿಜ್ಞಾನ ವಿಭಾಗದ ಮುಖ್ಯಸ್ಥೆ ವೀಣಾ ತಿರ್ಲಾಪುರ ಪ್ರಾಸ್ತಾವಿಕವಾಗಿ ಮಾತನಾಡಿ ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿದರು. ಮಹಿಳಾ ಸಬಲೀಕರಣ ಘಟಕದ ಸದಸ್ಯೆ ಶ್ವೇತಾ ರಾಚಯ್ಯನವರ ಹಾಗೂ ಸಂಚಾಲಕಿ ಗೌರಾ ಯಳಮಲಿ ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸುಮಾರು 130 ವಿದ್ಯಾರ್ಥಿನಿಯರು ಭಾಗವಹಿಸಿ ವಿವಿಧ ಕೌಶಲ್ಯಗಳ ಕುರಿತು ಪ್ರಾಯೋಗಿಕ ಜ್ಞಾನ ಪಡೆದರು. ಕಾರ್ಯಾಗಾರವು ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸ, ಸೃಜನಶೀಲತೆ ಹಾಗೂ ಸ್ವಾವಲಂಬನೆಯ ಮನೋಭಾವ ಬೆಳೆಸಲು ಸಹಕಾರಿಯಾಯಿತು.

## ಬೇಂದ್ರೆ ಸಾಹಿತ್ಯಶಕ್ತಿಯ ಛಾಯೆ ಗೋಪಾಲ ವಾಜಪೇಯಿ ಬರಹದಲ್ಲಿತ್ತು; ರಮೇಶ ನವಲೆ

# ವಾಜಪೇಯಿ ಸಾಹಿತ್ಯದ ಅಧ್ಯಯನ ಅಗತ್ಯ

**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಬೇಂದ್ರೆ ಅವರ ಸಾಹಿತ್ಯದಲ್ಲಿನ ಸೃಜನಶೀಲತೆ, ಭಾಷೆಯ ಮೇಲಿನ ಹಿಡಿತ ಹಾಗೂ ಬದುಕಿನ ಸೂಕ್ಷ್ಮತೆಗಳನ್ನು ಕಾವ್ಯಾತ್ಮಕವಾಗಿ ಕಟ್ಟಿಕೊಡುವ ಸಾಮರ್ಥ್ಯದ ಛಾಯೆ ಸಾಹಿತಿ, ರಂಗಕರ್ಮಿ, ಗೀತರಚನೆಕಾರ ಹಾಗೂ ಪತ್ರಕರ್ತರಾಗಿದ್ದ ದಿ. ಗೋಪಾಲ ವಾಜಪೇಯಿ ಅವರ ಬರಹಗಳಲ್ಲೂ ಕಾಣುತ್ತದೆ ಎಂದು ಸಾಹಿತಿ ರಮೇಶ ನವಲೆ ಹೇಳಿದರು.

ಪಟ್ಟಣದ ಶಂಕರಭಾರತಿ ಕಲ್ಯಾಣ ಮಂಟಪದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 'ಮಾಸದ ಮಾತು-43' ಕಾರ್ಯಕ್ರಮದಲ್ಲಿ ಗೋಪಾಲ ವಾಜಪೇಯಿ ಅವರ ಸಾಧನೆಯ ಹಾದಿ ಕುರಿತು ಅವರು ಮಾತನಾಡಿದರು.

ಪಂಪನ ತಿರುಳ್ಗನ್ನಡ ಹಾಗೂ ಪುಲಿಗೆರೆಯ ಸಾಂಸ್ಕೃತಿಕ ನೆಲದೊಂದಿಗೆ ನಂಟು ಹೊಂದಿದ್ದ ವಾಜಪೇಯಿ ಅವರು ಪತ್ರಿಕೋದ್ಯಮದ ಜತೆಗೆ ಸಾಹಿತ್ಯ, ನಾಟಕ, ಸಿನಿಮಾ ಹಾಗೂ ಸಂಗೀತ ಕ್ಷೇತ್ರಗಳಲ್ಲೂ ತಮ್ಮದೇ ಛಾಪು ಮೂಡಿಸಿದ್ದರು. ಉತ್ತರ ಕರ್ನಾಟಕದ ನೆಲ, ನುಡಿ, ಬದುಕು ಮತ್ತು ಸಂಸ್ಕೃತಿಯ ಸೂಕ್ಷ್ಮತೆಗಳನ್ನು ತಮ್ಮ ಬರಹ ಹಾಗೂ ಸೃಜನಶೀಲ ಕೃತಿಗಳ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದರು. ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ದುಡಿಸಿಕೊಳ್ಳುವ ಅವರ ಸಾಮರ್ಥ್ಯ ವಿಶೇಷವಾಗಿತ್ತು ಎಂದರು.




ರಂಗಭೂಮಿಯಲ್ಲಿ ನಾಟಕ ರಚನೆ ಹಾಗೂ ಅನುವಾದದ ಮೂಲಕ ಗಮನ ಸೆಳೆದಿದ್ದ ವಾಜಪೇಯಿ ಅವರು 'ದೊಡ್ಡಪ್ಪ' ಸೇರಿದಂತೆ ಕೃತಿಗಳ ಮೂಲಕ ತಮ್ಮ ರಂಗಪ್ರಜ್ಞೆ ಮೆರೆದಿದ್ದರು. 'ನಾಗಮಂಡಲ', 'ಸಂಗ್ಯಾ ಬಾಳ್ಯಾ', 'ಸಿಂಗಾರೆವ್ವ' ಸೇರಿದಂತೆ ಹಲವು ಚಿತ್ರಗಳಿಗೆ ಗೀತೆ ರಚಿಸಿ ಚಿತ್ರರಂಗದಲ್ಲೂ ಗುರುತಿಸಿಕೊಂಡಿದ್ದರು. 'ನಾಗಮಂಡಲ'ದ ಗೀತೆಗಳ ಮೂಲಕ ಅವರ ಕಾವ್ಯಶಕ್ತಿ ಹೆಚ್ಚಿನ ಜನರಿಗೆ ತಲುಪಿತು ಎಂದು ನವಲೆ ಹೇಳಿದರು.

> ಒಬ್ಬ ಸೃಜನಶೀಲ ವ್ಯಕ್ತಿಯ ಕೃತಿಗಳು ಕಾಲದೊಂದಿಗೆ ಮರೆಯಾಗದೆ ಉಳಿಯಬೇಕಾದರೆ ಅವುಗಳ ಸಮಗ್ರ ದಾಖಲಾತಿ ಮತ್ತು ಅಧ್ಯಯನ ನಡೆಯಬೇಕು. ವಾಜಪೇಯಿ ಅವರ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಇನ್ನಷ್ಟು ವ್ಯಾಪಕವಾಗಿ ನಡೆಯಬೇಕಿದೆ.
> – ಗಿರೀಶ ವಾಜಪೇಯಿ, ಸಹೋದರ

ಸಹೋದರ ಗಿರೀಶ ವಾಜಪೇಯಿ ಮಾತನಾಡಿ, ಗೋಪಾಲ ವಾಜಪೇಯಿ ಬಹುಮುಖ ಪ್ರತಿಭೆಯಾಗಿದ್ದರೂ ಅವರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕೊಡುಗೆಗೆ ದೊರೆಯಬೇಕಾದಷ್ಟು ಬೆಳಕು ಸಿಕ್ಕಿಲ್ಲ. ಅವರ ನಾಟಕ, ಪತ್ರಿಕಾ ಬರಹ, ಗೀತಸಾಹಿತ್ಯ, ಸಿನಿಮಾ ಹಾಗೂ ರಂಗಚಟುವಟಿಕೆಗಳನ್ನು ಸಮಗ್ರವಾಗಿ ದಾಖಲಿಸಿ ಅಧ್ಯಯನ ನಡೆಸಬೇಕಿದೆ ಎಂದರು.

ಪುತ್ರ ವಿಶ್ವಾಸ ಗೋಪಾಲ ವಾಜಪೇಯಿ ಮಾತನಾಡಿ, ತಂದೆಯ ಅಪರೂಪದ ವ್ಯಕ್ತಿತ್ವ ಹಾಗೂ ಸಾಹಿತ್ಯ ಸೇವೆಯ ಕುರಿತು ಪುಸ್ತಕವೊಂದನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು. ತಾಲೂಕು ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೋಪಾಲ ಪಡ್ನೀಸ್ ಕಾರ್ಯಕ್ರಮ ಉದ್ಘಾಟಿಸಿದರು. ಬಸವೇಶ ಮಹಾಂತಶೆಟ್ಟರ, ಗುರುರಾಜ ಪಾಟೀಲಕುಲಕರ್ಣಿ, ಅರವಿಂದ ದೇಶಪಾಂಡೆ, ಸಿ.ಜೆ. ಹಿರೇಮಠ, ಎಸ್.ಎಫ್. ಆದಿ, ಗುರು ಮೆಡ್ಲೇರಿ, ಬಿ.ಕೆ. ಕುಲಕರ್ಣಿ, ಡಾ. ಎಸ್.ಜಿ. ಹೂವಿನ, ಮಾಲಾದೇವಿ ದಂದರಗಿ, ಡಿ.ಪಿ. ಹೇಮಾದ್ರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಮಲ್ಲು ಕಳಸಾಪುರ ಹಾಗೂ ಪಂಚಮಿ ಅಂಬಿಗೇರ ಅವರು ವಾಜಪೇಯಿ ರಚಿಸಿದ ಗೀತೆಗಳನ್ನು ಪ್ರಸ್ತುತಪಡಿಸಿದರು.

# ಜಮಖಂಡಿಯಲ್ಲಿ ಅ.11ರಿಂದ ರಂಭಾಪುರಿ ದಸರಾ

**ವಿಜಯಸಾಕ್ಷಿ ಸುದ್ದಿ, ಜಮಖಂಡಿ**

ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಅ.11ರಿಂದ 21ರವರೆಗೆ ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳ 35ನೇ ವರ್ಷದ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನ ನಡೆಯಲಿದೆ.



ಕಡಪಟ್ಟಿ ಶ್ರೀ ಬಸವಣ್ಣ ದೇವಸ್ಥಾನದ ಆವರಣದಲ್ಲಿ ನಿರ್ಮಿಸಿರುವ ಮಾನವ ಧರ್ಮ ಮಂಟಪದಲ್ಲಿ ಪ್ರತಿದಿನ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಅ.11ರಂದು ಕೇಂದ್ರ ಶಿಕ್ಷಣ ಸಚಿವ ಪ್ರಹ್ಲಾದ ಜೋಶಿ ಸಮ್ಮೇಳನ ಉದ್ಘಾಟಿಸಲಿದ್ದು, ಸಂಸದ ಗೋವಿಂದ ಎಂ. ಕಾರಜೋಳ ಹಾಗೂ ಮಾಜಿ ಸಚಿವ ಮುರುಗೇಶ ನಿರಾಣಿ ಭಾಗವಹಿಸಲಿದ್ದಾರೆ. ಅ.12ರಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರು 'ಶ್ರೀ ರಂಭಾಪುರಿ ಶಿವಾನಂದ ಜಗದ್ಗುರುಗಳ ಜೀವನ ದರ್ಶನ' ಕೃತಿ ಬಿಡುಗಡೆ ಮಾಡಲಿದ್ದಾರೆ.

ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು, ಸಂಸದರು, ಶಾಸಕರು, ಮಾಜಿ ಸಚಿವರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ಪೀಠದ ಪ್ರಕಟಣೆ ತಿಳಿಸಿದೆ.

ಧರ್ಮ, ಸಾಹಿತ್ಯ, ಆಧ್ಯಾತ್ಮ, ಕೃಷಿ ಹಾಗೂ ಸಾಮಾಜಿಕ ವಿಚಾರಗಳ ಕುರಿತು ವಿವಿಧ ಕ್ಷೇತ್ರಗಳ ತಜ್ಞರು ಹಾಗೂ ಮಠಾಧೀಶರು ಉಪನ್ಯಾಸ ನೀಡಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಶಿವಾಚಾರ್ಯ ರತ್ನ, ಸಾಹಿತ್ಯ ಸಿರಿ, ಸಾಧನ ಸಿರಿ, ರಂಭಾಪುರಿ ಯುವಸಿರಿ ಹಾಗೂ ವೀರಶೈವ ಧರ್ಮ ಸಿರಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. 'ಬಾಳಿಗೆ ಬೆಳಕು', 'ಸುಬೋಧ ಚಿಂತನೆ', 'ರಂಭಾಪುರಿ ಬೆಳಗು' ಹಾಗೂ 2027ರ ದಿನದರ್ಶಿಕೆ ಸೇರಿದಂತೆ ಹಲವು ಕೃತಿಗಳು ಬಿಡುಗಡೆಯಾಗಲಿವೆ.

ಪ್ರತಿದಿನ ಬೆಳಿಗ್ಗೆ 8 ಗಂಟೆಗೆ ಮೈಗೂರು ರಸ್ತೆಯ ಕಲೂತಿ ಕಲ್ಯಾಣ ಮಂಟಪದಲ್ಲಿ ವಿಶ್ವಕಲ್ಯಾಣ ಹಾಗೂ ಶಾಂತಿಗಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸಲಿದ್ದಾರೆ.

ಅ.21ರಂದು ವಿಜಯದಶಮಿ ಅಂಗವಾಗಿ ಶ್ರೀ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜಮಖಂಡಿ ನಗರದ ಪ್ರಮುಖ ಬೀದಿಗಳಲ್ಲಿ ಸಡಗರದಿಂದ ನಡೆಯಲಿದೆ. ಶಮೀಪೂಜೆಯ ಬಳಿಕ ಮಾನವ ಧರ್ಮ ವೇದಿಕೆಯಲ್ಲಿ ಜಗದ್ಗುರುಗಳು ಶಾಂತಿ ಸಂದೇಶ ಅನುಗ್ರಹಿಸಲಿದ್ದು, ವಿಶೇಷ ಪ್ರಶಸ್ತಿ ಪ್ರದಾನ ಹಾಗೂ ಶಮೀ ಕಾಣಿಕೆ ಸಮರ್ಪಣೆ ನಡೆಯಲಿದೆ.

ಸಮ್ಮೇಳನದ ಸಿದ್ಧತೆಗಳು ವಿವಿಧ ಸಮಿತಿಗಳ ಮೂಲಕ ಭರದಿಂದ ಸಾಗಿವೆ ಎಂದು ಶ್ರೀ ರಂಭಾಪುರಿ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ತಿಳಿಸಿದ್ದಾರೆ.

# ರಂಗೇರಿದ 'ಪ್ರಾಜೆಕ್ಟ್ ಪಂಚತಂತ್ರ'



**ವಿಜಯಸಾಕ್ಷಿ ಸುದ್ದಿ, ಧಾರವಾಡ**

ರಂಗಾಯಣ ಧಾರವಾಡ ಹಾಗೂ ಸಾಲಾಪೂರ ನಾಟ್ಯಯೋಗ ಟ್ರಸ್ಟ್ ಸಹಯೋಗದಲ್ಲಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ 'ಪ್ರಾಜೆಕ್ಟ್ ಪಂಚತಂತ್ರ' ನಾಟಕ ಪ್ರದರ್ಶನ ಯಶಸ್ವಿಯಾಗಿ ನಡೆಯಿತು.

ನಿರ್ದಿಗಂತ ತಂಡದ ಕಲಾವಿದರು ನಾಟಕವನ್ನು ಪ್ರದರ್ಶಿಸಿದರು.

ಪ್ರೇಕ್ಷಕರ ಗಮನ ಸೆಳೆದ ಪ್ರದರ್ಶನಕ್ಕೆ ಉತ್ತಮ ಸ್ಪಂದನೆ ದೊರೆಯಿತು.

ಈ ಸಂದರ್ಭದಲ್ಲಿ ರಂಗಾಯಣದ ನಿರ್ದೇಶಕ ಝುಕೀರ ನದಾಫ, ರಂಗನಿರ್ದೇಶಕ ಡಾ. ಪ್ರಕಾಶ ಗರುಡ, ಬಿ.ಐ. ಈಳಿಗೇರ, ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಉಪಾಧ್ಯಕ್ಷ ಡಾ. ಸಂಜೀವ ಕುಲಕರ್ಣಿ, ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ, ಕಲ್ಲಪ್ಪ ಪೂಜಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಹುಬ್ಬಳ್ಳಿಯಲ್ಲಿ ನಿರ್ವಹಣಾ ಸಮಿತಿ ಸಭೆ

**ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ನಿರ್ವಹಣಾ ಸಮಿತಿ ಸಭೆ ಅಕ್ಟೋಬರ್ 7ರಂದು ಹುಬ್ಬಳ್ಳಿಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಸಂದೀಪ ಬಿಡಾಸಾರಿಯಾಜಿ ಅವರನ್ನು ಎಲಅಖ ಮಾಜಿ ಅಧ್ಯಕ್ಷ ಎಸ್.ಪಿ. ಸೌಂಶಿಮಠ ಹಾಗೂ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷ ಅಶೋಕ ನಿಲೂಗಲ ಅಭಿನಂದಿಸಿ ಶುಭಾಶಯ ಕೋರಿದರು.




# ಪಾನಮುಕ್ತರೇ ಸಮಾಜದ ನಿಜವಾದ ಸಾಧಕರು

**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಮದ್ಯಪಾನ ಹಾಗೂ ಇತರೆ ದುಶ್ಚಟಗಳಿಂದ ಮುಕ್ತರಾಗಿ ಹೊಸ ಜೀವನ ಆರಂಭಿಸಿರುವವರನ್ನು ಗೌರವಿಸಿ, ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಶಾಸಕ ನೇಮಿರಾಜ್ ನಾಯ್ಕ ಹೇಳಿದರು. ಹಗರಿಬೊಮ್ಮನಹಳ್ಳಿಯ ಶ್ರೀ ಕನ್ನಿಕಾ ಪರಮೇಶ್ವರಿ ಸಭಾಭವನದಲ್ಲಿ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಗಾಂಧಿ ಸ್ಮೃತಿ, ಪಾನಮುಕ್ತರ ಅಭಿನಂದನೆ ಹಾಗೂ ಜನಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮದ್ಯಪಾನದಿಂದ ಹಲವು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ವ್ಯಸನ ತ್ಯಜಿಸುವುದು ದೈಹಿಕ ಬದಲಾವಣೆಯಷ್ಟೇ ಅಲ್ಲ, ದೃಢ ಸಂಕಲ್ಪ ಮತ್ತು ಮಾನಸಿಕ ಶಕ್ತಿಯ ಪ್ರತೀಕ. ಪಾನಮುಕ್ತರಾಗಿ ಕುಟುಂಬದೊಂದಿಗೆ ನೆಮ್ಮದಿಯ ಜೀವನ ನಡೆಸುತ್ತಿರುವವರ ಸಾಧನೆ ಇತರರಿಗೆ ಪ್ರೇರಣೆಯಾಗಬೇಕು ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ವ್ಯಸನಮುಕ್ತ ಸಮಾಜ ನಿರ್ಮಾಣ ಸೇರಿದಂತೆ ಶಿಕ್ಷಣ, ಆರ್ಥಿಕ ನೆರವು ಹಾಗೂ ವಾತ್ಸಲ್ಯ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು. ಹಂಪಸಾಗರ ಶಿವಲಿಂಗ ರುದ್ರಮುನಿ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಪಾನಮುಕ್ತರನ್ನು ಸನ್ಮಾನಿಸಲಾಯಿತು. ಶಿವಪ್ಪ ನಾಯಕ ಕಾವಲಿ ಅಧ್ಯಕ್ಷತೆ ವಹಿಸಿದ್ದರು. ಸತೀಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಟರಾಜ ಬಾದಾಮಿ, ಪುರಸಭೆ ಅಧ್ಯಕ್ಷೆ ರೇಷ್ಮಾ ಸಿಕಂದರ್, ಕೋರಗಲ್ ರಾಘವೇಂದ್ರ ಶ್ರೇಷ್ಠಿ, ಶಿಲ್ಪಾ ಕಲಾ ಸೇರಿದಂತೆ ಜನಜಾಗೃತಿ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಾಧನೆಗೈದ 37 ವಿದ್ಯಾರ್ಥಿನಿಯರಿಗೆ ಗೌರವ



**ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶದಡಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ದರೋಜಿ ಈರಮ್ಮ ರೇಂಜರ್ಸ್ ಘಟಕದ ವಿದ್ಯಾರ್ಥಿನಿಯರ ಅಭಿಯೋಜನೆ ಹಾಗೂ ಸ್ವಾಗತ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿ, ರಾಜ್ಯ ಸಂಘಟನಾ ಸಹಾಯಕ ಆಯುಕ್ತರು ಹಾಗೂ ಕಲ್ಯಾಣ ಕರ್ನಾಟಕ ರೇಂಜರಿಂಗ್ ಸಂಯೋಜಕಿ ಮಹೇಶ್ವರಿ ಜಜೆರೆ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ರೇಂಜರ್ಸ್ ಚಟುವಟಿಕೆಗಳನ್ನು ವಿಸ್ತರಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ. ವಿದ್ಯಾರ್ಥಿನಿಯರು ಧೈರ್ಯ ಹಾಗೂ ಆತ್ಮಸ್ಥೈರ್ಯ ಬೆಳೆಸಿಕೊಂಡು ವ್ಯಕ್ತಿತ್ವ ರೂಪಿಸಿಕೊಳ್ಳುವುದರೊಂದಿಗೆ ವಿಶ್ವಮಟ್ಟದಲ್ಲಿ ಸಾಧನೆ ಮಾಡುವ ಗುರಿ ಹೊಂದಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಇತಿಹಾಸ ವಿಭಾಗದ ಮುಖ್ಯಸ್ಥೆ ಹಾಗೂ ಐಕ್ಯುಎಸಿ ಸಂಚಾಲಕಿ ಶುಭಾ ಎಸ್. ಮಾತನಾಡಿ, ವಿದ್ಯಾರ್ಥಿನಿಯರು ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡು ಜವಾಬ್ದಾರಿಯುತ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಘಟಕ ಮಲ್ಲೇಶಪ್ಪ ಕೆ.ಟಿ. ಅವರು ರೇಂಜರಿಂಗ್ ವಿಭಾಗದ ವಿವಿಧ ಹಂತಗಳು ಹಾಗೂ ಚಟುವಟಿಕೆಗಳ ಕುರಿತು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ನಿಪುಣ ಪರೀಕ್ಷೆಯಲ್ಲಿ ಯಶಸ್ವಿಯಾಗಿ ರಾಜ್ಯ ಪುರಸ್ಕಾರಕ್ಕೆ ಅರ್ಹತೆ ಪಡೆದ ಕಾಲೇಜಿನ 37 ವಿದ್ಯಾರ್ಥಿನಿಯರನ್ನು ಅಭಿನಂದಿಸಲಾಯಿತು.

ದರೋಜಿ ಈರಮ್ಮ ರೇಂಜರ್ಸ್ ಘಟಕದ ಸಂಚಾಲಕಿ ಶುಭಾ ಟಿ.ಇ. ಪ್ರಾಸ್ತಾವಿಕವಾಗಿ ಮಾತನಾಡಿ ಘಟಕದ ಚಟುವಟಿಕೆಗಳ ಕಿರು ಪರಿಚಯ ನೀಡಿದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕಿ ಲಲಿತಾ ಎನ್.ಕೆ., ನಿಕಟಪೂರ್ವ ಸಂಚಾಲಕಿ ಸುಮಿತ್ರಾ, ರೇಂಜರ್ಸ್ ಹಾಗೂ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ರಾಜ್ಮಾ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಸುಮಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಾವಿತ್ರಿ ನಿರೂಪಿಸಿದರು. ಲಕ್ಷ್ಮೀ ಸ್ವಾಗತಿಸಿದರು. ನೇತ್ರಾವತಿ ವಂದಿಸಿದರು.

## ಮುದ್ರಣ ಮಾಧ್ಯಮಕ್ಕೆ ವಿಶ್ವಾಸಾರ್ಹತೆ ಇಂದಿಗೂ ಬಲ

# ಭಾಷಾ ಕೌಶಲ್ಯವೇ ಪತ್ರಕರ್ತನ ಶಕ್ತಿ

**ವಿಜಯಸಾಕ್ಷಿ ಸುದ್ದಿ, ಧಾರವಾಡ**

ಪರಿಣಾಮಕಾರಿ ಸಂವಹನಕ್ಕೆ ಭಾಷಾ ಕೌಶಲ್ಯ ಅತ್ಯಗತ್ಯ. ಸ್ಪಷ್ಟವಾಗಿ ಬರೆಯುವ ಹಾಗೂ ಸರಳವಾಗಿ ವಿಷಯವನ್ನು ಜನರಿಗೆ ತಲುಪಿಸುವ ಸಾಮರ್ಥ್ಯವೇ ಪತ್ರಕರ್ತನ ಪ್ರಮುಖ ಶಕ್ತಿ ಎಂದು ಡೆಕ್ಕನ್ ಹೆರಾಲ್ಡ್ ಇಂಗ್ಲಿಷ್ ದಿನಪತ್ರಿಕೆಯ ಸ್ಥಾನಿಕ ಸಂಪಾದಕ ವೆಂಕಟರಾಜ ಕೆ.ಜಿ. ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಆಶ್ರಯದಲ್ಲಿ ಶ್ರೀ ವೇಮನ ಪೀಠ ಸಭಾಭವನದಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ, ಸಂವಹನ ಕೂಟದ ಉದ್ಘಾಟನೆ ಹಾಗೂ ಮುದ್ರಣ ಮಾಧ್ಯಮ ಕುರಿತ ನಾಲ್ಕು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮುದ್ರಣ ಮಾಧ್ಯಮ ಇಂದಿಗೂ ತನ್ನದೇ ಆದ ಮಹತ್ವ ಉಳಿಸಿಕೊಂಡಿದೆ. ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಷಯಗಳು ಓದುಗರ ನೆನಪಿನಲ್ಲಿ ದೀರ್ಘಕಾಲ ಉಳಿಯುವುದರ ಜತೆಗೆ ಖಚಿತತೆ ಮತ್ತು ವಿಶ್ವಾಸಾರ್ಹತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದರು.



ಪತ್ರಿಕೋದ್ಯಮ ಕೇವಲ ವೃತ್ತಿಯಲ್ಲ, ಅದೊಂದು ನಾಗರಿಕ ಜವಾಬ್ದಾರಿ. ಸಮಾಜದ ಜಟಿಲ ಸಮಸ್ಯೆಗಳನ್ನು ಜನರ ಮುಂದಿಡುವುದರ ಜತೆಗೆ ಧನಾತ್ಮಕ ಬದಲಾವಣೆಗೆ ಮಾಧ್ಯಮಗಳು ಪರಿಣಾಮಕಾರಿ ವೇದಿಕೆಯಾಗಬೇಕು. ಪ್ರಾದೇಶಿಕ ಭಾಷೆಗಳ ವೈವಿಧ್ಯತೆ ಹಾಗೂ ಸ್ಥಳೀಯ ಭಾಷೆಯ ಬಳಕೆಯ ಮಹತ್ವವನ್ನು ತಮ್ಮ ಅನುಭವದ ಮೂಲಕ ವಿವರಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ. ಖಾನ್, ವಿದ್ಯಾರ್ಥಿಗಳು ಪತ್ರಿಕೋದ್ಯಮದ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು. ನಿರಂತರವಾಗಿ ಪತ್ರಿಕೆಗಳನ್ನು ಓದುವ ಮೂಲಕ ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದರು.

> ಸರಳ ಭಾಷೆಯ ಹಿಂದೆ ಸ್ಪಷ್ಟ ಚಿಂತನೆ ಇರಬೇಕು. ವಾಸ್ತವಾಂಶದ ನಿಖರತೆ ಮತ್ತು ಸಾಮಾಜಿಕ ಹೊಣೆಗಾರಿಕೆಯೇ ಪತ್ರಿಕೋದ್ಯಮದ ವಿಶ್ವಾಸವನ್ನು ಉಳಿಸುತ್ತದೆ.
> – ವೆಂಕಟರಾಜ ಕೆ.ಜಿ., ಸ್ಥಾನಿಕ ಸಂಪಾದಕ, ಡೆಕ್ಕನ್ ಹೆರಾಲ್ಡ್

ಕೃತಕ ಬುದ್ಧಿಮತ್ತೆಯನ್ನು ಜವಾಬ್ದಾರಿಯುತವಾಗಿ ಬಳಸುವುದರ ಜತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಕೌಶಲ್ಯ ಬೆಳೆಸಿಕೊಳ್ಳಬೇಕು.

ಸುದ್ದಿಗಳು ಸಮಸ್ಯೆಗಳನ್ನು ಬಿಂಬಿಸುವುದರ ಜತೆಗೆ ಪರಿಹಾರದ ಮಾರ್ಗಗಳ ಬಗ್ಗೆಯೂ ಬೆಳಕು ಚೆಲ್ಲುವಂತಿರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥ ಪ್ರೊ. ಜೆ.ಎಂ. ಚಂದುನವರ, ಪತ್ರಕರ್ತನಿಗೆ ಉತ್ತಮ ಗ್ರಹಿಕೆ, ಅಧ್ಯಯನಶೀಲತೆ ಹಾಗೂ ಸ್ವಯಂಶಿಸ್ತು ಅಗತ್ಯ. ವಿದ್ಯಾರ್ಥಿಗಳು ವಿಭಾಗದ ಸೌಲಭ್ಯಗಳನ್ನು ಬಳಸಿಕೊಂಡು ವೃತ್ತಿಪರ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ವೆಂಕಟರಾಜ ಕೆ.ಜಿ. ಅವರನ್ನು ಸನ್ಮಾನಿಸಲಾಯಿತು. 'ವಿದ್ಯಾ ಸಮಾಚಾರ' ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಪ್ರಾಧ್ಯಾಪಕ ಪ್ರೊ. ಸಂಜಯಕುಮಾರ ಮಾಲಗತ್ತಿ, ಶ್ರೀ ವೇಮನ ಪೀಠದ ಸಂಯೋಜಕ ಪ್ರೊ. ಎಚ್.ಬಿ. ನೀಲಗುಂದ, ಡೆಕ್ಕನ್ ಹೆರಾಲ್ಡ್ ಹಿರಿಯ ವರದಿಗಾರ ಆರ್. ಶ್ರೀನಿಧಿ, ಸಂವಹನ ಕೂಟದ ಕಾರ್ಯದರ್ಶಿ ಬಾಳಪ್ಪ ಮಾದನೂರ, ಖಜಾಂಚಿ ಜಯಪಾಲ್ ಎಂ. ತಡಸದ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ನಕಲಿ ಸುದ್ದಿ ತಡೆಗೆ ಸತ್ಯ ಪರಿಶೀಲನೆ ಅಗತ್ಯ: ಡಾ. ಶೈಲೇಶರಾಜ ಅರಸು

# ಮಾಧ್ಯಮ ಸಾಕ್ಷರತೆಯೇ ಜಾಗೃತ ಸಮಾಜದ ಬಲ

**ವಿಜಯಸಾಕ್ಷಿ ಸುದ್ದಿ, ಧಾರವಾಡ**

ಡಿಜಿಟಲ್ ಯುಗದಲ್ಲಿ ಪ್ರತಿಯೊಬ್ಬರೂ ಮಾಧ್ಯಮ ಸಾಕ್ಷರತೆ ಹೊಂದುವುದು ಅಗತ್ಯ. ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸುತ್ತಿದ್ದು, ಅವುಗಳ ಕಾರ್ಯವಿಧಾನ ಹಾಗೂ ಪ್ರಸಾರವಾಗುವ ಮಾಹಿತಿಯನ್ನು ವಿಮರ್ಶಾತ್ಮಕವಾಗಿ ಅರ್ಥಮಾಡಿಕೊಳ್ಳುವ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದು ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹ ಪ್ರಾಧ್ಯಾಪಕ ಡಾ. ಶೈಲೇಶರಾಜ ಅರಸು ಹೇಳಿದರು.




ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಭಾಭವನದಲ್ಲಿ ನಡೆದ ಮಾಧ್ಯಮ ಸಾಕ್ಷರತಾ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಸಿನಿಮಾ, ರೇಡಿಯೋ ಸೇರಿದಂತೆ ವಿವಿಧ ಮಾಧ್ಯಮಗಳು ಸಮಾಜದ ಮೌಲ್ಯಗಳು ಹಾಗೂ ಸಾಮಾಜಿಕ ಅರಿವಿನ ಮೇಲೆ ಪ್ರಭಾವ ಬೀರುತ್ತವೆ.

ನಕಲಿ ಸುದ್ದಿ ಮತ್ತು ತಪ್ಪು ಮಾಹಿತಿಯ ಹರಡುವಿಕೆ ಹೆಚ್ಚಿರುವ ಇಂದಿನ ಸಂದರ್ಭದಲ್ಲಿ ಮಾಹಿತಿಯ ಮೂಲ, ವಿಶ್ವಾಸಾರ್ಹತೆ ಹಾಗೂ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದರು. ಮಾಧ್ಯಮ ವಿಷಯಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು, ಪಕ್ಷಪಾತ ಮತ್ತು ವಿಭಿನ್ನ ದೃಷ್ಟಿಕೋನಗಳನ್ನು ಗುರುತಿಸುವುದು ಹಾಗೂ ಜವಾಬ್ದಾರಿಯುತವಾಗಿ ಮಾಹಿತಿಯನ್ನು ಹಂಚಿಕೊಳ್ಳುವುದು ಮಾಧ್ಯಮ ಸಾಕ್ಷರತೆಯ ಪ್ರಮುಖ ಅಂಶಗಳಾಗಿವೆ ಎಂದು ಹೇಳಿದರು.

ಕಾರ್ಯಾಗಾರದ ಬಳಿಕ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಡಾ. ಶೈಲೇಶರಾಜ ಅರಸು ಉತ್ತರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥ ಡಾ. ಜೆ.ಎಂ. ಚಂದುನವರ, ಮಾಧ್ಯಮ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಮಾಧ್ಯಮ ಸಾಕ್ಷರತೆಯ ಅರಿವು ಅತ್ಯಗತ್ಯ ಎಂದರು.

ಸ್ವಪ್ನಾ ಭಾಟೀಯಾ ಸ್ವಾಗತಿಸಿ ಪರಿಚಯಿಸಿದರು. ವಿಭಾಗದ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka